MOTION OF THANKS TO THE GOVERNOR'S ADDRESS

(Debate Continued)

ಸಭಾಪತಿಯವರು.—ಈಗ ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣ ನಿರ್ಣಯದ ಮೇಲಿನ ಚರ್ಚೆ. ಶ್ರೀ ವಾನ್ ಅಂಜನಪ್ಪನವರು ಮಾತನಾಡಬಹುದು.

†ಶ್ರೀ ಜಿ. ವಿ. ಅಂಜನಪ್ಪ (ಪದವೀಧರರ ಕ್ಷೇತ್ರ).—ಮಾನ್ಯ ಸಭಾಪತಿಗಳೇ, ನಿನ್ನೆಯ ದಿನ ನಾನು ರಾಜ್ಯಪಾಲರ ಭಾಷಣಕ್ಕೆ ಶ್ರೀಮಾನ್ ಅಡಿಗರವರು ವಂದನೆಗಳನ್ನರ್ಪಿಸಿತಕ್ಕ ನಿರ್ಣಯವನ್ನು ಏನು ಘಂಡಿಸಿದರು ಅದನ್ನು ಏಕೆ ವಿರೋಧ ಮಾಡಬೇಕು ಎಂಬುದನ್ನು ಹೇಳುತ್ತಾ ಇದ್ದೆ. ರಾಜ್ಯಪಾಲರು ದೇಶಕ್ಕೆ ಸಂಬಂಧಪಟ್ಟ ಹಾಗೆ, ಜನಗಳ ಜೀವನಕ್ಕೆ ಸಂಬಂಧಪಟ್ಟ ಹಾಗೆ ದೇಶದ ಅಡಳಿತಕ್ಕೆ ಸಂಬಂಧಪಟ್ಟ ಹಾಗೆ ಗಹನವಾದ ಅತಿ ಜರೂರಾದ ವಿಚಾರಗಳ ಬಗ್ಗೆ ಪ್ರಸ್ತಾಪಮಾಡದೇ ಅಮುಖ್ಯವಾದ, ಪ್ರಾಮುಖ್ಯವಲ್ಲದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಎಂದು ಆಗ ಹೇಳಿದೆ, ರಾಜ್ಯಪಾಲರಂತಹ ಹೊಣಿಗಾರಿಕೆಯನ್ನು ಹೊತ್ತಿರತಕ್ಕಂತಹ ವ್ಯಕ್ತಿಗಳು ರಾಜ್ಯದ ಅಧಿಪತಿಗಳಾಗಿರತಕ್ಕಂತಹವರಿಂದ ಬರತಕ್ಕ ಭಾಷಣ ಇದು ಅಲ್ಲ ಎಂದು ಹೇಳಿದೆ. ಅವರು ಪ್ರಸ್ತಾಪಮಾಡದೇ ಇರತಕ್ಕ ವಿಚಾರಗಳಲ್ಲಿ ಒಂದು ಪಾನನಿರೋಧ ಎಂದು ಹೇಳಿದೆ. ಅದೇ ರೀತಿಯಲ್ಲಿ ದೇಶದ ಜನ ಜೀವನಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರದ ಅಧೀನಕ್ಕೊಳಪಟ್ಟಿರತಕ್ಕ ಬೃಹತ್ ಕೈಗಾರಿಕೆ, ಸಣ್ಣ ಪುಟ್ಟ ಕೈಗಾರಿಕೆಗಳು ಸುಮಾರು 50 ಕೈಗಾರಿಕೆಗಳು ಇವೆ, ಕೋಟ್ಯಾಂತರ ರೂಪಾಯಿಗಳನ್ನು ಅದರಲ್ಲಿ ಇನ್‌ವೆಸ್ಟ್ ಮಾಡಿದ್ದಾರೆ, ಅದರ ಬಗ್ಗೆ ಎಷ್ಟರಮಟ್ಟಿಗೆ ಪ್ರತಿಫಲ, ಆದಾಯ ದೇಶಕ್ಕೆ ಬರುತ್ತಾ ಇದೆ ಎಂಬ ವಿಚಾರವನ್ನು ಅವರು ಪ್ರಸ್ತಾಪ ಮಾಡಿಲ್ಲ. ಇದು ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆ. ಮತ್ತು ರಾಜ್ಯದ ಬೊಕ್ಕನಕ್ಕೆ ಸಂಬಂಧಪಟ್ಟ ಸ್ಪಶ್ನೆ, ಇದನ್ನು ಮುಖ್ಯವಾಗಿ ಅವರು ಪ್ರಸ್ತಾಪ ಮಾಡಬೇಕಾಗಿತ್ತು. ಅದೇ ರೀತಿ ಸಹಕಾರ ಸಂಸ್ಥೆಗಳ ಮೂಲಕ ನಡೆಯತಕ್ಕ ಸಹಕಾರಿ ನಕ್ಕರೆ ಕಾರ್ಖಾನೆಗಳು ಏನಿವೆ ಅವುಗಳ ಮೇಲೆ ಕೋಟಿಗಟ್ಟಲೆ ಹಣವನ್ನು ಹಾಕಿದ ಮೇಲೆ ಅವು ಎಷ್ಟು ಮಟ್ಟಿಗೆ ಜಯಪ್ರದವಾಗಿ, ಫಲಪ್ರದವಾಗಿ ಕೆಲಸ ಮಾಡುತ್ತಾ ಇವೆ ಎಂಬುದರ ಬಗ್ಗೆ ಒಂದು ಚಕಾರವನ್ನೂ ಕೂಡ ಎತ್ತಿಲ್ಲ, ಕೋಟಿಗಟ್ಟಲೆ ಹಣ ಇವತ್ತಿನವರೆವಿನ ಪೋಲಾಗುತ್ತಾ ಇದೆ, ಹಾಳಾಗುತ್ತಾ ಇದೆ. ತಮ್ಮ ಊರಿನದೇ ಆದ ಮಂಡ್ಯ ನಕ್ಕರೆ ಕಾರ್ಖಾನೆ ಎಷ್ಟರಮಟ್ಟಿಗೆ ನಡೆಯುತ್ತಾ ಇದೆ ಎಂಬುದನ್ನು ಮಾನ್ಯ ವ್ಯವಸಾಯ ಮತ್ತು ವಿದ್ಯಾಸಚಿವರು ಹೇಳಿದರೆ ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ.—ಪಾಂಡವಪುರ ಸಹಕಾರ ನಕ್ಕರೆ ಕಾರ್ಖಾನೆ ಬಹಳ ಚೆನ್ನಾಗಿ ನಡೆಯುತ್ತಾ ಇವೆ.

ಶ್ರೀ ಜಿ. ವಿ. ಅಂಜನಪ್ಪ.—ಅಷ್ಟೇ ರೀತಿ ಗೌರಿಬಿದನೂರು ಸಹಕಾರಿ ನಕ್ಕರೆ ಕಾರ್ಖಾನೆ ವಿಷಯ ಸಹಕಾರ ಮಂತ್ರಿಗಳು ಹೇಳಲಿ.

ಶ್ರೀ ಪಿ. ಎಂ. ನಾಡಗೌಡ (ಅಭಿವೃದ್ಧಿ ಮತ್ತು ಸಹಕಾರೀ ಶಾಖೆಗಳ ಮಂತ್ರಿಗಳು).—ಕಂಪಲಿ ನಕ್ಕರೆ ಕಾರ್ಖಾನೆ ನೋಡಿ, ಸಂಕೇಶ್ವರ ನಕ್ಕರೆ ಕಾರ್ಖಾನೆ ನೋಡಿ ಮೈಸೂರು ರಾಜ್ಯಕ್ಕೆ ಬೇಕಾಗುವಷ್ಟು ನಕ್ಕರೆಯಲ್ಲಿ ಶೇಕಡ 40 ರಷ್ಟು ಅವುಗಳಿಂದ ಉತ್ಪನ್ನವಾಗುತ್ತದೆ, ಅವುಗಳನ್ನು ಬಿಟ್ಟು ಯಾವುವನ್ನೋ ಹೇಳುತ್ತೀರಿ.

ಶ್ರೀ ಜಿ. ವಿ. ಅಂಜನಪ್ಪ.—ಇರಲಿ, ಹಿರಿಯೂರು ನಕ್ಕರೆ ಕಾರ್ಖಾನೆ ಇನ್ನೂ ಪ್ರಾರಂಭವೇ ಆಗಿಲ್ಲ. ಅಲ್ಲಿ ಲಕ್ಷಗಟ್ಟಲೆ ಹಣವನ್ನು ಪೋಲು ರೂಪದಲ್ಲಿ ಹಾಕಿದ್ದೀರಿ. ಏಕೆ ಅವನ್ನು ಪ್ರಾರಂಭ ಮಾಡುವುದಕ್ಕೆ ಇವತ್ತಿನವರೆಗೂ ಪ್ರಯತ್ನ ಮಾಡಿಲ್ಲ? ಅದರ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡಬೇಕಾಗಿತ್ತು ಮಾಡಿಲ್ಲ, ಏಕೆ ಮೌನವನ್ನು ತಾಳಿದ್ದಾರೆ? ನೀವು ಇನ್‌ವೆಸ್ಟ್ ಮಾಡಿರತಕ್ಕ ಸಂಘ ಸಂಸ್ಥೆಗಳು, ಮತ್ತು ಕೈಗಾರಿಕೆಗಳು ಒಂದೂ ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಮುಖ್ಯವಾದ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡದೇ ಯಾವುದೋ ಗಹನವಲ್ಲದ ಮುಖ್ಯವಲ್ಲದ ವಿಚಾರಗಳನ್ನು ಹೇಳಿದ್ದಾರೆ. ಮತ್ತು, ಈಗ ಎರಡು ಮೂರು ವರ್ಷಗಳಿಂದ ಇಡೀ ದೇಶದ ಗಮನವನ್ನು ಸೆಳೆದಿರತಕ್ಕ ರೈತರ ಹಿತಕ್ಕೆ ಮತ್ತು ರೈತರ ಏಳಿಗೆಗೆ, ರೈತರ ಉದ್ಧಾರಕ್ಕೆ ಸಂಬಂಧಪಟ್ಟ ಪ್ರಶ್ನೆ ಭೂಕಂದಾಯ, ಇದರ ಬಗ್ಗೆ ಕೂಡ ರಾಜ್ಯಪಾಲರು ಒಂದು ಚಕಾರವನ್ನೂ ಆಡಿಲ್ಲ. ಕಳೆದ ಮಹಾ ಚುನಾವಣೆಯಲ್ಲಿ ಇದು ದೇಶದ ಜನತೆಗೂ ಗೊತ್ತು, ಈ ಮಾನ್ಯ ಸಭೆಗೂ ಗೊತ್ತು, ಮತ್ತು ಸಭಾಧ್ಯಕ್ಷರಾದ ತಮ್ಮ ಗಮನಕ್ಕೂ ಬಂದಿದೆ,

† Indicates that the remarks or speaches have not been revised by the member concerned

(ಶ್ರೀ ಜಿ. ಎ. ಅಂಜನಪ್ಪ)

ಈಗಿರತಕ್ಕ ಕಂದಾಚಾರದ ಕಂದಾಯವನ್ನು, ಹಳೇ ಪದ್ಧತಿಯ ಕಂದಾಯವನ್ನು ವಜಾ ಮಾಡುತ್ತೇವೆ ಎಂದು ಹೇಳಿ ಜನರನ್ನು ಮರುಳು ಮಾಡಿ, ವಂಚನೆ ಮಾಡಿ, ಮೋಸ ಮಾಡಿ, ಅವರ ಕಣ್ಣಿಗೆ ಮಣ್ಣೆರಚಿ, ನಂಬಿಕೆ ದ್ರೋಹ ಮಾಡಿ, ಅವರಿಂದ ಓಟನ್ನು ಕಿತ್ತುಕೊಂಡು ಬಂದು ಅಧಿಕಾರಕ್ಕೆ ಬಂದಿದ್ದೀರಲ್ಲಾ ಇದಕ್ಕಿಂತಲೂ ವಂಚನೆ ದ್ರೋಹ ದೇಶದಲ್ಲಿ ಇದೆಯೇ ಎಂದು ಕೇಳುತ್ತೇನೆ. ಕೊಟ್ಟ ವಾಗ್ದಾನವನ್ನು ಈಡೇರಿಸದೆ ವಚನ ಭ್ರಷ್ಟರಾಗಿದ್ದೀರಿ, ಹಾಗಿರುವಾಗ ನೀವು ಅಧಿಕಾರದಲ್ಲಿರುವುದಕ್ಕೇ ರಾಯಕ್ಕೇ ಎಂದು ಮಂತ್ರಿಗಳನ್ನು ಕೇಳುತ್ತೇನೆ. ಅವತ್ತು ಕಂದಾಯ ವಜಾಮಾಡುತ್ತೇವೆ ಎಂದು ಏಕೆ ಹೇಳಬೇಕಾಗಿತ್ತು? ಮತ್ತು ಈ ಸರ್ಕಾರದವರು ಈಗಿರತಕ್ಕ ಪದ್ಧತಿಯನ್ನು ತೆಗೆದುಹಾಕಬೇಕು, ಇದಕ್ಕೆ ಬದಲಾಗಿ ಯಾವ ರೀತಿ ಕಂದಾಯ ಹಾಕಬೇಕು ಎನ್ನುವುದರ ಬಗ್ಗೆ ಮಂತ್ರಿ ಮಂಡಲದ ಒಂದು ಉಪಸಮಿತಿಯನ್ನು ರಚನೆ ಮಾಡಿದ್ದರಂತೆ, ಆ ಸಮಿತಿ ಈ ತನಕ ಸೇರಲೇ ಇಲ್ಲ, ಒಂದು ವೇಳೆ, ಸೇರಿದ್ದರೆ ಯಾವುದಾದರೂ ಒಂದು ವರದಿಯನ್ನು ಕೊಟ್ಟಿದ್ದಾರೆಯೇ? ಅದರಲ್ಲಿ ಏನು ರಹಸ್ಯ ಇದೆ ಎಂಬುದು ಮುಖ್ಯ ಮಂತ್ರಿಗಳಿಗೆ ಮತ್ತು ಅವರ ಸಹೋದ್ಯೋಗಿಗಳಿಗೆ ಮಾತ್ರ ಗೊತ್ತು. ಯಾವುದಾದರೂ ಒಂದು ವಾಗ್ದಾನ ಮಾಡಿದರೆ ಅದರಂತೆ ನಡೆಯಬೇಕು, ನುಡಿದಂತೆ ನಡೆಯಬೇಕು ಎಂದು ಬಸವಣ್ಣನವರು ಹೇಳಿದ್ದಾರೆ. ನುಡಿದಂತೆ ನಡೆಯದೇ ಇದ್ದವನು ದ್ರೋಹಿ ಎಂದು ಅವರೇ ಹೇಳಿದ್ದಾರೆ.

ಶ್ರೀ ಜಿ. ಬಿ. ಶಂಕರರಾವ್ (ಕಂದಾಯ ಶಾಖೆಯ ಉಪಮಂತ್ರಿಗಳು).—ಈಗಿರುವ ಪದ್ಧತಿಯ ಪ್ರಕಾರವೇ ಕಂದಾಯ ಕೊಡುತ್ತೇವೆ ಎಂದು ಜನತೆ ಹೇಳುತ್ತಾರೆ, ಆದ್ದರಿಂದ ನಮ್ಮ ಅಭಿಪ್ರಾಯವನ್ನು ಬದಲಾಯಿಸಿದ್ದೇವೆ.

ಶ್ರೀ ಜಿ. ಎ. ಅಂಜನಪ್ಪ.—ಇದು ಸತ್ಯಕ್ಕೆ ನೆತ್ತಿಮೇಲೆ ಹೋದಂತೆ ಹೇಳುತ್ತಾ ಇದ್ದೀರಿ. ಇದಕ್ಕಿಂತ ಅಸತ್ಯ ಮತ್ತೊಂದು ಇಲ್ಲ. ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಹೊಣೆಗಾರಿಕೆಯಿಂದ, ಜವಾಬ್ದಾರಿಯಿಂದ ಮಾತನಾಡಬೇಕು. ಈ ಮಾನ್ಯ ಸಭೆಯ ವಿರೋಧ ಪಕ್ಷದ ನಾಯಕರು ಒಮ್ಮೆ ಅಲ್ಲ, ಅನೇಕ ಬಾರಿ ಪ್ರಸ್ತಾಪ ಮಾಡಿದ್ದಾರೆ, ಪ್ರತಿಯೊಬ್ಬ ರೈತರ ಜೊತೆಯಲ್ಲೂ ಮಾತನಾಡಿದ್ದಾರೆ. ಅನೇಕ ಬಹಿರಂಗ ಸಭೆಗಳಲ್ಲಿ ಸಹಸ್ರಾರು ಜನರಿರತಕ್ಕ ಸಭೆಗಳಲ್ಲಿ ಮಂತ್ರಿಗಳಾಗಿರತಕ್ಕವರು ಹಾಲಿ ಇರತಕ್ಕ ಕಂದಾಯವನ್ನು ರದ್ದುಮಾಡುತ್ತೇವೆ, ವಜಾ ಮಾಡುತ್ತೇವೆಂದು ಹೇಳಿ ಭಾಷಣಗಳನ್ನು ಮಾಡಿದ್ದಾರೆ. ಹೀಗೆ ಜನರ ಮುಂದೆ ಇವರು ಹುಚ್ಚುಹುಚ್ಚಾಗಿ ಭಾಷಣ ಮಾಡಿ ದೇಶದಲ್ಲಿರತಕ್ಕೆ ಜನರಿಗೆ ಈಗ ವಂಚನೆಯನ್ನು ಮಾಡಿದ್ದಾರೆ. ಈ ದಿವಸ ರಾಜ್ಯದ ಯಾವ ಪ್ರದೇಶಕ್ಕೆ ನನ್ನನ್ನು ಈ ಮಂತ್ರಿಗಳು ಕರೆದುಕೊಂಡು ಹೋಗಲಿ ಅಲ್ಲಿರತಕ್ಕ ಜನರು ನಮಗೆ ಕಂದಾಯವನ್ನು ರದ್ದು ಮಾಡುವುದು ಬೇಡ, ಅದಿರಲೇಬೇಕು ಎಂದು ಅವರು ಹೇಳಿದರೆ ನಾನು ನನ್ನ ಮಾತುಗಳನ್ನು ಪಾಪವನ್ನು ತೆಗೆದುಕೊಳ್ಳುತ್ತೇನೆ. ದೇಶದ ಜನರಿಗೆ ವಂಚನೆ ಮಾಡತಕ್ಕದ್ದು ಮಹಾ ದ್ರೋಹ. ದೇಶದ ಆಡಳಿತ ಜವಾಬ್ದಾರಿಯನ್ನು ಹೊತ್ತ ಜನರು ಹೀಗೆ ಜನರನ್ನು ಮೋಸ ಮಾಡಬಾರದು.

ಶ್ರೀ ಜಿ. ಬಿ. ಶಂಕರರಾವ್.—ಈ ದಿವಸ ತಾನೆ ನಮ್ಮಲ್ಲಿ 70-80 ಜನರ ಒಂದು ಡೆಲಗೇಷನ್ ಬಂದಿದೆ. ಅವರು ಒಂದು ಪ್ರಿಂಟೆಡ್ ಮೆಮೊರಾಂಡಂ ತಂದಿದ್ದಾರೆ. ಅದರಲ್ಲಿ ಅವರು ಈಗಿರತಕ್ಕ ಕಂದಾಯ ಪದ್ಧತಿ ಇದ್ದಂತೆಯೇ ಇರಲಿ, ಇದನ್ನು ಬದಲಾವಣೆ ಮಾಡಬೇಡಿ, ನಾವು ಕಂದಾಯವನ್ನು ಕೊಡುವುದಕ್ಕೆ ತಯಾರಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಸಿ. ನರಸಿಂಹನ್ (ವಿಧಾನಸಭಾ ಕ್ಷೇತ್ರ).—ಕಂದಾಯ ಕೊಡುತ್ತೇವೆಂದು ಹೇಳತಕ್ಕವರು ಕೊಡಲಿ, ಆದರೆ ಅದನ್ನು ಕೊಡಲು ಶಕ್ತಿ ಇಲ್ಲದಿದ್ದರೆ ಯಾರು ಕೊಡುವುದಕ್ಕಾಗುವುದಿಲ್ಲ ವೆಂದು ಹೇಳುತ್ತಾರೋ ಅಂಥವರಿಗೆ ಅದನ್ನು ವಜಾ ಮಾಡಿ.

ಶ್ರೀ ಪಿ. ವಿ. ಅಂಜನಪ್ಪ.—ರೈತರು ಕಂದಾಯ ಹಾಕಿ, ವಾಟರ್ ರೇಟ್ ಹಾಕಿ ನಾವು ಕೊಡಲು ಸಿದ್ಧರಾಗಿದ್ದೇವೆಂದು ಅವರು ಹೇಳಿದರೆ ಆಗ ನಾನು ಒಪ್ಪಿಕೊಳ್ಳುತ್ತೇನೆ ಅವರು ಅದನ್ನು ನನ್ನ ಸಮಕ್ಷಮ ಹೇಳಬೇಕು ಅಷ್ಟೆ.

ಶ್ರೀ ಕೆ. ಟಿ. ಶಾಮಯ್ಯಗೌಡ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ನನ್ನಲ್ಲಿ ಒಂದು ಅಚ್ಚಾದ ಪತ್ರಿಕೆ ಇದೆ ಈ ಪತ್ರಿಕೆಯಲ್ಲಿ ಹೀಗೆ ಹೇಳಿದ್ದಾರೆ "ಈಗಿರತಕ್ಕ ಕಂದಾಯ ಪದ್ಧತಿಯನ್ನು ರದ್ದು ಮಾಡಬಾರದು. ಅದು ಇದ್ದಂತೆಯೇ ಇರಲಿ, ಇದನ್ನು ಬದಲಾಯಿಸಿದರೆ ಬಹಳ ಕುಂದಕ ಉಂಟಾಗುತ್ತದೆ. ಈಗಿರತಕ್ಕ ಪದ್ಧತಿಯ ಪ್ರಕಾರ ನಾವು ಕಂದಾಯವನ್ನು ಕೊಡುವುದಕ್ಕೆ ಸಿದ

ರಾಗಿದ್ದೇವೆ, ಕಂದಾಯ ಕೊಡುವುದಕ್ಕೆ ನಾವು ಎಂದೂ ಹಿಂಜರಿಯುವುದಿಲ್ಲ'' ಎಂಬುದಾಗಿ ನಮೂದಿಸಲಾಗಿದೆ. ನಾನು ಕೂಡ ಒಬ್ಬ ಕೃಷಿಕನಾಗಿ ಕಂದಾಯ ಕೊಡತಕ್ಕ ರೈತನಾಗಿದ್ದೇನೆ. ನಾವು ಕಂದಾಯವನ್ನು ರದ್ದು ಮಾಡಬೇಕೆಂದು ಎಂದೂ ಹೇಳಿಲ್ಲ.

ಶ್ರೀ ಜಿ. ವಿ. ಅಂಜನಪ್ಪ.—ನೀವು ಅಡುವುದೇ ಒಂದು, ನುಡಿಯುವುದೇ ಒಂದು ಮತ್ತು ಆಚರಣೆ ಮಾಡುವುದೇ ಒಂದು. ನೀವು ಬನವಣ್ಣನವರಿಗೂ ಕೂಡ ಬಹಳ ವಂಚನೆ ಮಾಡಿದ್ದೀರಿ.

ಈ ದಿವಸ ಆಡಳಿತ ಪಕ್ಷದವರು ದೇಶಕ್ಕೆ ಮಾಡಿರತಕ್ಕ ಅನ್ಯಾಯ ವರ್ಣನಾತೀತವಾದ್ದು. ಇವರು ಕಳೆದ 20 ವರ್ಷಗಳಿಂದ ಜನರಿಗೆ ಮಾಡಿರತಕ್ಕ ವಂಚನೆ, ಅನ್ಯಾಯ ಅಷ್ಟಿಷ್ಟಲ್ಲ. ವರ್ಗರಹಿತ ಸಮಾಜವನ್ನು ರಚನೆ ಮಾಡುತ್ತೇವೆಂದು ಹೇಳಿದರು, ಬಡವ ಬಲ್ಲಿದನೆಂಬ ಭೇದವಿಲ್ಲದ ಸಮಾಜವನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದರು. ಜಾತ್ಯತೀತ ಸಮಾಜವನ್ನು ಜಾರಿಗೆ ತರುತ್ತೇವೆಂದು ಹೇಳಿದರು. ಶೋಷಣೆರಹಿತ ಸಮಾಜವನ್ನು ಜಾರಿಗೆ ತರುವುದಾಗಿ ಹೇಳಿದರು. ಇವುಗಳಲ್ಲಿ ಯಾವು ದೊಂದನ್ನೂ ಮಾಡಲಿಲ್ಲ. ಜನರಿಗೆ ಅತ್ಯಗತ್ಯವಾದ ಅನ್ನ, ವಸತಿ, ಬಟ್ಟೆ ಆಂಥ ಪ್ರಾಮುಖ್ಯವಾದ ವಿಚಾರಗಳನ್ನು ತಮ್ಮ ಭಾಷಣದಲ್ಲಿ ರಾಜ್ಯಪಾಲರು ಪ್ರಸ್ತಾಪ ಮಾಡದೆ ಯಾವುದೋ ಕೇವಲ ಕ್ಷುಲ್ಲ ಕಾರಣಾಂಥ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಯಾವುದೋ ಒಂದು ಸ್ಕಾಲರ್‌ಷಿಪ್ ಕೊಡತಕ್ಕ ವಿಚಾರ ಅಥವಾ ಯಾವುದೋ ರಸ್ತೆ ನಿರ್ಮಾಣ ಮಾಡತಕ್ಕ ವಿಚಾರ ಇಂಥ ಸಣ್ಣಪುಟ್ಟ ವಿಷಯಗಳನ್ನು ಅವರು ಪ್ರಸ್ತಾಪ ಮಾಡಿ ಅವರು ತಮ್ಮ ಬೆಲೆಯುಳ್ಳ ಕಾಲವನ್ನು ಹರಣಮಾಡಿದ್ದಾರೆ.

100 ಕೋಟಿ ಇದ್ದ ರಾಜ್ಯದ ಆದಾಯವನ್ನು 180 ಕೋಟಿಗೆ ಏರಿಸಲಾಗಿದೆ ಎಂದು ಭಾಷಣದಲ್ಲಿ ಹೇಳಿದ್ದಾರೆ. ನಿಜ, ಇವರು ಜನರ ಮೇಲೆ ಪ್ರತ್ಯಕ್ಷ ಅಪ್ರತ್ಯಕ್ಷ, ತೆರಿಗೆಗಳನ್ನು ಹೇರಿ, ಅನೇಕ ಕಂದಾಯಗಳ ಹೊರೆಯನ್ನು ಜಾಸ್ತಿಮಾಡಿ ರೈತನನ್ನು ಶೋಷಣೆ ಮಾಡಿ ರಾಜ್ಯಾದಾಯವನ್ನು ಹೆಚ್ಚಿಸಿದ್ದಾರೆ. ಆದರೆ ಹಾಗೆ ಬರತಕ್ಕ ಉತ್ಪತ್ತಿಯನ್ನು ರಾಜ್ಯದ ಪ್ರಜೆಗಳಿಗೆ ಯಾವರೀತಿ ಸದ್ವಿನಿಯೋಗ ಮಾಡಲಾಗುತ್ತಿದೆ ಎಂಬುದರ ಬಗ್ಗೆ ಅವರು ಒಂದು ಚಕಾರವನ್ನೂ ಕೂಡ ಎತ್ತಿಲ್ಲ. ಸರ್ಕಾರದವರು ಅಂದರೆ ಸರ್ಕಾರದ ವಕ್ತಾರರು ಏನೊಂದು ಬರೆದು ಕೊಟ್ಟರೆ ಅದನ್ನೇ ರಾಜ್ಯಪಾಲರು ಓದಿದ್ದಾರೆ. ಆ ವಕ್ತಾರರು ದೇಶದಲ್ಲಿ ಒಂದು ಕೆರೆ ಅಥವಾ ಒಂದು ಜಲಾಶಯವನ್ನು ನಿರ್ಮಾಣಮಾಡುತ್ತೇವೆಂದು ಹೇಳಿ ರೈತನ ಶಕ್ತಿಯೇನೆಂಬುದನ್ನು ಅಳತೆಮಾಡಿ 300 ರಿಂದ 500 ರೂಪಾಯಿಗಳವರೆಗೆ ನಾನಾ ತೆರಿಗೆಗಳನ್ನು ಹಾಕಿದ್ದಾರೆ. ಆ ತೆರಿಗೆಗಳ ವಿಚಾರದಲ್ಲಿ ವಾಸ್ತವಾಂಶಗಳೇನು ಎಂಬುದನ್ನು ಪರಿಶೀಲನೆ, ಆ ವಕ್ತಾರರು ಬರೆದುಕೊಟ್ಟಿದ್ದನ್ನೇ ಓದಿರತಕ್ಕದ್ದು ರಾಜ್ಯಪಾಲರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ರೋಷ ಮಾಡಿದ್ದಾರೆಂದು ಹೇಳದೆ ವಿಧಿಯಿಲ್ಲ. ಅನೇಕಾವರ್ತಿ ನಮ್ಮ ರೆವಿನ್ಯೂ ಮಂತ್ರಿಗಳು ಬಹಿರಂಗ ಭಾಷಣಗಳಲ್ಲಿ ಇನ್ನು ಜನರ ಮೇಲೆ ಹೆಚ್ಚಿನ ತೆರಿಗೆಯನ್ನು ಹೇರಿ ನಮ್ಮ ರಾಜ್ಯಾದಾಯವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲ, ರೈತನ ಬೆನ್ನೆಲುಬು ಹೊರೆಯನ್ನು ಹೊರಲಾರದೆ ಬಗ್ಗಿಹೋಗಿದೆ. ಆದುದರಿಂದ ಸರ್ಕಾರಕ್ಕೆ ಬೇಕಾಗುವ ಹೆಚ್ಚುವರಿ ಆದಾಯವನ್ನು ಪಡೆಯಲು ಸರ್ಕಾರ ದೇಶದಲ್ಲಿರತಕ್ಕ ಅಮೃತಮಹಲ್ ಕಾವಲುಗಳನ್ನು ಮಾರಾಟ ಮಾಡಬೇಕೆಂದು ತೀರ್ಮಾನ ಮಾಡಿದೆ ಎಂಬುದಾಗಿ ಅನೇಕಾವರ್ತಿ ಹೇಳಿದ್ದಾರೆ. ಜನರ ಮೇಲೆ ಇನ್ನು ತೆರಿಗೆಯನ್ನು ಹೇರುವುದಕ್ಕೆ ಹೋದರೆ ಅವರು ದಂಗೆ ಏಳಬಹುದು. ಆದ್ದರಿಂದ ಅದಕ್ಕೆ ಬದಲಾಗಿ ಅಮೃತಮಹಲ್ ಕಾವಲುಗಳನ್ನು ಮಾರಿ ಅದರಿಂದ ಬಂದ ಹಣದಿಂದ ದೇಶಕ್ಕೆ ಅನುಕೂಲಮಾಡಬೇಕಾಗಿದೆ ಎಂದು ಹೇಳಿದ್ದಾರೆ. ಈ ವಿಷಯದ ಬಗ್ಗೆ ರಾಜ್ಯಪಾಲರು ಒಂದು ಚಕಾರವನ್ನೂ ಸಹಾ ಎತ್ತಿಲ್ಲ. ಏಕೆ? ರಾಜ್ಯಪಾಲರು ಕೆಲಸಕ್ಕೆ ಬಾರದ ವಿಷಯಗಳನ್ನೆಲ್ಲಾ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ? ಅವರು ಮಾಮೂಲಿನಂತೆ ಶಾಸನ ಸಭೆಗಳನ್ನು ಕರೆದು ಅವರಿಗೆ ಸರ್ಕಾರಿ ವಕ್ತಾರರು ಓದಿಸಿರತಕ್ಕ ಅಂಕಿಅಂಶಗಳ ಬಗ್ಗೆ ಸತ್ಯಾಸತ್ಯತೆಯೇನೆಂಬುದನ್ನು ಪರಿಶೀಲನೆ ಸರ್ಕಾರದವರು ಏನು ಬರೆದು ಕೊಟ್ಟರೆ ಅದು ಸರಿಯೋ ತಪ್ಪೋ ಎಂಬುದನ್ನೂ ಸಹಾ ಆಲೋಚನೆ ಮಾಡದೆ ಅವರು ಭಾಷಣ ಮಾಡಿರತಕ್ಕದ್ದು ಒಂದು ದೊಡ್ಡ ಅಕ್ರಮ.

ಇನ್ನು ವಿದ್ಯಾಮಂತ್ರಿಗಳ ವಿಚಾರಕ್ಕೆ ಬಂದರೆ—ವಿದ್ಯಾಮಂತ್ರಿಗಳೂ ಮತ್ತು ನಮ್ಮ ಮುಖ್ಯ ಮಂತ್ರಿಗಳೂ ಇಬ್ಬರೂ ಅನೇಕ ಬಹಿರಂಗ ಭಾಷಣಗಳಲ್ಲಿ ಮಾತನಾಡುತ್ತ ದೇಶದಲ್ಲಿ ಇನ್ನೂ ಅನೇಕ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ತೆರೆಯುತ್ತೇವೆಂದು ಒಂದು ಕಡೆ ಭಾಷಣ ಮಾಡಿದ್ದಾರೆ, ಇನ್ನೊಂದು ಸಭೆಯಲ್ಲಿ ಇನ್ನು ಮುಂದೆ ಈ ಕಾಲೇಜುಗಳನ್ನೆಲ್ಲಾ ಅತಿ ಶೀಘ್ರದಲ್ಲೇ ಮುಚ್ಚಲು ಕಾಲ ಸಮೀಪಿಸುತ್ತಿದೆ ಎಂದು ಹೇಳಿದ್ದಾರೆ. ಇದರಿಂದ ದೇಶದ ಜನತೆಯಲ್ಲಿ ತುಂಬಾ ವ್ಯಾಕುಲತೆಯುಂಟಾಗಿದೆ. ಈ ವಿಚಾರದಲ್ಲಿ ಸಹಾ ರಾಜ್ಯಪಾಲರು ಒಂದು ಚಕಾರವನ್ನೂ ಸಹಾ ಎತ್ತಿಲ್ಲ. ಇಂಥ ಗಹನವಾದ ವಿಚಾರಗಳನ್ನೆಲ್ಲಾ ಕೈ ಬಿಟ್ಟು ಅನುಪಯುಕ್ತವಾದ, ಕೆಲಸಕ್ಕೆ ಬಾರದ ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಸರ್ಕಾರದವರು ಮುಂದೆ ದೇಶದಲ್ಲಿ ಈ ತಾಂತ್ರಿಕ ಶಾಲಾ

(ಶ್ರೀ ಜಿ. ಎ. ಆಂಜನಪ್ಪ)

ಕಾರ್ಮಿಕರುಗಳ ವಿಚಾರದಲ್ಲಿ ಏನೊಂದು ಖಚಿತವಾದ ನಿಲುವನ್ನು ತಾಳುವರೆಂಬ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಏನೊಂದನ್ನೂ ಹೇಳದಿರುವುದು ಬಹಳ ಶೋಚನೀಯ. ರಾಜ್ಯಪಾಲರು ಪೊನ್ನೆತಾನೆ ದೇಶದಲ್ಲಿ ನಡೆದುಹೋದ ತಿಪಟೂರು ಮತ್ತು ಮಂಡ್ಯಾ ಜಿಲ್ಲೆಗಳ ಚುನಾವಣೆಗಳ ವಿಚಾರವನ್ನೇಕೆ ಪ್ರಸ್ತಾಪಮಾಡಲಿಲ್ಲ! ರಾಜ್ಯಪಾಲರು ಒಂದು ಪಕ್ಷವನ್ನು ವಹಿಸಿ ಮಾತನಾಡಿದ್ದಾರೆ, ಅದು ಸರಿಯಾದ್ದಲ್ಲ. ಅವರು ಇದನ್ನು ಹೇಳಿ ಹೀಗೆ ದೇಶದಲ್ಲಿ ಕಾಂಗ್ರೆಸ್ ಒಂದು ಅವನತಿಯನ್ನು ಹೊಂದುತ್ತಿದೆ ಎಂತಲಾದರೂ ಹೇಳಬಹುದಾಗಿತ್ತು. ದಿನ ಬೆಳಗಾದರೆ ದೇಶದಲ್ಲಿ ಮುಷ್ಕರಗಳು—ಇಂಜಿನಿಯರುಗಳ ಮುಷ್ಕರ, ಅದಾದನಂತರ ಓವರ್‌ಸೀಯರುಗಳ ಮುಷ್ಕರ, ಸರ್ಕಾರಿ ನೌಕರರ ಮುಷ್ಕರ ಇವೇ ದಿನಬೆಳಗಾದರೆ ನಮಗೆ ಪತ್ರಿಕೆಗಳಲ್ಲಿ ಕಾಣತಕ್ಕ ಸುದ್ದಿಗಳು. ಈ ವಿಚಾರಗಳ ಬಗ್ಗೆ ರಾಜ್ಯಪಾಲರು ಏಕೆ ಪ್ರಸ್ತಾಪ ಮಾಡಲಿಲ್ಲ? ದೇಶಕ್ಕೆ ಬರತಕ್ಕ ಆದಾಯವನ್ನೇನೋ ಜಾಸ್ತಿ ಮಾಡಿಕೊಂಡರು—ಬಡವರ ರಕ್ತವನ್ನು ಹೀರಿ ಆದಾಯವನ್ನು ಹೆಚ್ಚಿಸಿಕೊಂಡರು. ಅದರಿಂದ ಎಷ್ಟರಮಟ್ಟಿಗೆ ದೇಶಕ್ಕೆ ಕಲ್ಯಾಣವಾಗಿದೆ, ಜನರಿಗೆ ಕಲ್ಯಾಣವಾಗಿದೆ ಎಂಬುದನ್ನು ಏಕೆ ಹೇಳಲಿಲ್ಲ! ಮತ್ತೆ ರಾಜ್ಯಪಾಲರು ಈ ದೇಶದ ಹಿತವನ್ನು ಹಾಗೂ ಜನತೆಯ ಕಲ್ಯಾಣವನ್ನು ಸಾಧನೆಮಾಡಬೇಕೆಂದು ಅನೇಕ ವಿಷಯಗಳನ್ನು ಅವರ ಭಾಷಣದಲ್ಲಿ ಹೇಳಿದ್ದರೂ ಆಡಳಿತ ನಡೆಸುವ ಕಾಂಗ್ರೆಸ್ ಪಕ್ಷದವರು ಸುಮಾರು 20 ವರ್ಷಗಳಿಂದಲೂ ಇದುವರೆಗೆ ಜನತೆಗೆ ಅದರಲ್ಲಿಯೂ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಒದಗಿಸದೆ, ನಿರುದ್ಯೋಗ ಸಮಸ್ಯೆ ಇತ್ತೀಚೆಗೆ ಬಹಳವಾಗಿ ಜಾಸ್ತಿಯಾಗುತ್ತಿದೆ. ಅವೇನೂ ಕಡಿಮೆಯಾಗುತ್ತಾ ಇಲ್ಲ. ಈ ದೇಶದಲ್ಲರತಕ್ಕ ಜನರಿಗೆ ಕೆಲಸಮಾಡಲು ತಕ್ಕ ಶಕ್ತಿ ಇರುವವರೆಗೆ ಉದ್ಯೋಗ ಅವಕಾಶವನ್ನು ಕಲ್ಪಿಸದೇ ಇರುವ ಸಂಗತಿಯನ್ನು ಏತಕ್ಕೆ ರಾಜ್ಯಪಾಲರು ಅವರ ಭಾಷಣದಲ್ಲಿ ಪ್ರಸ್ತಾಪಮಾಡಲಿಲ್ಲವೆಂದು ನಾನು ಕೇಳಬೇಕಾಗಿದೆ.

ಇನ್ನು ಈ ದೇಶದ ಆಡಳಿತವನ್ನು ಎಷ್ಟರಮಟ್ಟಿಗೆ ಸುಧಾರಣೆ ಮಾಡಬಹುದು, ಎಷ್ಟರಮಟ್ಟಿಗೆ ಮಿತವ್ಯಯವನ್ನು ಸಾಧನೆಮಾಡಬಹುದು ಎಂಬ ಬಗ್ಗೆ 3-4 ಸಮಿತಿಗಳನ್ನು ನೇಮಕಮಾಡಿದ್ದರೂ ಅದರಿಂದೇನೂ ಪ್ರಯೋಜನವಾಗಲಿಲ್ಲ. ಆಡಳಿತದಲ್ಲಿರುವ ಲೋಪಗಳನ್ನು ಹೋಗರಾಡಿಸಲು ಮತ್ತು ಮಿತವ್ಯಯವನ್ನು ಸಾಧಿಸಲು ತಜ್ಞರ ಸಮಿತಿಗಳನ್ನು ನೇಮಿಸಿದ್ದೂ ಆಯಿತು. ಆದರೂ ಏನೂ ಫಲಕಾರಿಯಾಗಿಲ್ಲ. ಆಡಳಿತ ಸುಧಾರಣ ಸಮಿತಿ ಅಪೇಕ್ಷೆ ಮೂಲಕ, ಸರ್ಕಾರದವರೇ ನೇಮಿಸಿರತಕ್ಕ ಸಮಿತಿಗಳ ಅಪೇಕ್ಷೆ ಮೂಲಕ ಹಾಗೂ ಸರ್ಕಾರದವರ ಸೂಚನೆ ಮೂಲಕ ಎಷ್ಟರಮಟ್ಟಿಗೆ ಈ ದೇಶದಲ್ಲಿ ಆಡಳಿತವನ್ನು ಸುಧಾರಣೆಮಾಡಿದ್ದಾರೆ, ಜನರಿಗಿರತಕ್ಕ ಕುಂದುಕೊರತೆಗಳನ್ನು ಪರಿಹಾರಮಾಡಲು ಸರ್ಕಾರದವರು ಏನು ವ್ಯವಸ್ಥೆಮಾಡಿದ್ದಾರೆ, ಎಲ್ಲೆಲ್ಲಿ ಮಿತವ್ಯಯವನ್ನು ಸಾಧನೆ ಮಾಡಿದ್ದಾರೆ? ಈ ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಮುಗ್ಗಟ್ಟು ಇರುವಾಗ, ಹಣದ ತೊಂದರೆ ಜಾಸ್ತಿ ಇರುವಾಗ, ಸರ್ಕಾರದವರು ಒಂದು ತೀರ್ಮಾನವನ್ನು ತೆಗೆದುಕೊಂಡು, ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಮಿತವ್ಯಯವನ್ನು ಸಾಧಿಸುವ ಬಗ್ಗೆ ಏತಕ್ಕೆ ರಾಜ್ಯಪಾಲರು ವಿಚಾರಮಾಡಲಿಲ್ಲ? ಆಡಳಿತ ಸುಧಾರಣಾ ಸಮಿತಿಯವರು ಒಂದು ಆದೇಶವನ್ನು ಕೊಟ್ಟರೆ ಅದಕ್ಕೆ ತದ್ವಿರುದ್ಧವಾಗಿ ಏತಕ್ಕೆ ನಡೆಯಬೇಕು? ಅವರೇ ರಚನೆಮಾಡಿರತಕ್ಕ ಆಡಳಿತ ಮಂಡಲಿಯ ವರದಿಯನ್ನು ನಿರ್ಲಕ್ಷ್ಯಮಾಡಿ ಅವರ ಸೂಚನೆಗೆ ವಿರೋಧವಾಗಿ ಹೋಗಿದ್ದಾರೆ; ಇದು ಸರಿಯಲ್ಲ, ನ್ಯಾಯವಲ್ಲ. ಜಾಸ್ತಿ ಸಂಬಳ ಎರುವ ಅಧಿಕಾರಿಗಳ ಹುದ್ದೆಗಳನ್ನೇ ಹೆಚ್ಚು ಮಾಡುತ್ತಿದ್ದಾರೆ. ಎಲ್ಲಿ ನೋಡಿದರೂ ಜಾಯಿಂಟ್ ಡೈರೆಕ್ಟರ್ಸ್, ಡೆಪ್ಯುಟಿ ಡೈರೆಕ್ಟರ್ಸ್, ಚೀಫ್ ಇಂಜಿನಿಯರುಗಳು ಲೆಕ್ಕವಿಲ್ಲದಷ್ಟು ಇದ್ದಾರೆ. ಹೆಚ್ಚು ಹೆಚ್ಚಾಗಿ ಉನ್ನತ ಅಧಿಕಾರಿಗಳ ಹುದ್ದೆಗಳನ್ನೇ ಜಾಸ್ತಿಮಾಡತ್ತಿದ್ದಾರೆ. ಕೆಳದರ್ಜೆ ನೌಕರರ ಕಷ್ಟ ಸುಖಗಳನ್ನು ಯೋಚನೆ ಮಾಡಲು ಇವರಿಗೆ ಒಂದು ನಿಮಿಷ ಅವಕಾಶವೂ ಇಲ್ಲ, ಇವರೇನೋ ದೇಶದ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಸರ್ಕಾರದ ಆಡಳಿತದ ವಿಚಾರಗಳನ್ನು ಸರಿಯಾಗಿ ರಾಜ್ಯಪಾಲರ ಗಮನಕ್ಕೆ ತರದೇ ಇರುವುದು ತೀರಾ ವಿಷಾದವಾದ ಸಂಗತಿ.

ಇನ್ನು ರಾಜ್ಯಪಾಲರು ಈ ಸಭೆಗೆ ಉಭಯಸದನಗಳನ್ನು ಕುರಿತು ಮಾಡಿರತಕ್ಕ ಭಾಷಣ ವಂದನೆಗೆ ಖಂಡಿತವಾಗಿ ಅರ್ಹವಲ್ಲ. ಅವರೇನೋ ಉತ್ತಮ ಸಲಹೆಗಳನ್ನು ದೇಶದ ಮುಂದೆ ಇಟ್ಟಿದ್ದಾರೆ. ಈ ವರ್ಷ ಆಡಳಿತ ಪಕ್ಷ ಏನೇನು ಮಹಾಸಾಧನೆಗಳನ್ನು ಮಾಡಬೇಕು ಎಂಬುದಾಗಿ ಗುರಿ ಇಟ್ಟುಕೊಂಡಿದ್ದಾರೆಯೋ ಅವನ್ನೆಲ್ಲಾ ಹೇಳಿದ್ದರೆ ಖಂಡಿತ ಅವರ ಭಾಷಣ ವಂದನೆಗೆ ಅರ್ಹವಾಗುತ್ತಿತ್ತು. ಹಾಗೆ ಮಾಡಿಲ್ಲದ ಕಾರಣ ಅದು ಈಗ ಬಹಳ ನಿಷ್ಪ್ರಯೋಜಕವಾಗಿ, ನಿಜವಾಗಿ ವಂದನೆಗೆ ಅರ್ಹವಾದ ಭಾಷಣವಾಗಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಇದುವರೆಗೂ ರಾಜ್ಯಪಾಲರು ಅವರ ಭಾಷಣದಲ್ಲಿ ಪ್ರಸ್ತಾಪ ಮಾಡದೇ ಇರತಕ್ಕ ವಿಷಯಗಳನ್ನು ಹೇಳಿದ್ದೇನೆ.

ಇನ್ನು ರಾಜ್ಯಪಾಲರು ಪ್ರಸ್ತಾಪಮಾಡಿರುವ ವಿಚಾರಗಳ ಬಗ್ಗೆ ಕೆಲವು ಅಂಶಗಳನ್ನು ಇಲ್ಲಿ ಹೇಳಬೇಕಾಗಿದೆ. ರಾಜ್ಯಪಾಲರು ಶಾಸನಗಳ ನುವ್ಯವಸ್ಥೆ, ದೇಶದಲ್ಲಿನ ಅಡಳಿತ ಬಹಳ ಚೆನ್ನಾಗಿದೆ ಮತ್ತೆ ಎಲ್ಲಯೂ ಶಾಸನ ಭಂಗವಾಗುತ್ತಾ ಇಲ್ಲ, ಆಡಳಿತ ಬಹಳ ಚೆನ್ನಾಗಿದೆಯೆಂದು ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳಿದ್ದಾರೆ. ಇದನ್ನು ಬೆಳಕಿಗೆ ತಂದು ನೋಡಿದರೆ, ಈ ದೇಶದಲ್ಲಿ ಅಗದೇ ಇರತಕ್ಕ ವಿಚಾರಗಳು, ಅಂದರೆ, ಮಹಿಳೆಯರ ಮಾನಾಪಹಾರವಾಗುತ್ತಿದೆ, ವಿದ್ಯಾರ್ಥಿಗಳನ್ನು ನಿರ್ದಯತೆಯಿಂದ ಕೊಲ್ಲುತ್ತಿದ್ದಾರೆ, ಅವರ ಮೇಲೆ ಗುಂಡು ಹಾರಿಸುತ್ತಿದ್ದಾರೆ, ವಿದ್ಯಾ ಸಂಸ್ಥೆಗಳಿಗೆ ನುಗ್ಗಿ ಅಧ್ಯಾಪಕರನ್ನು ಹೊಡೆಯುತ್ತಿದ್ದಾರೆ. ಇದಕ್ಕಿಂತಲೂ ನಾಚಿಕೆಗೇಡಿನತನ ಇನ್ನೇನು ಇದೆಯೆಂದು ಕೇಳುತ್ತೇನೆ. ಯಾರೋ ಸಮಾಜ ವಿರೋಧ ವ್ಯಕ್ತಿಗಳು ಈ ಒಂದು ಅವಕಾಶವನ್ನು ದುರುಪಯೋಗಪಡಿಸಿಕೊಂಡು ಅಶಾಂತಿಗೆ ಕಾರಣರಾಗಿದ್ದಾರೆಂದು ಹೇಳುತ್ತಿದ್ದಾರೆ. ಆ ಸಮಾಜ ವಿರೋಧ ಶಕ್ತಿಗಳು ಯಾರು ಎಂಬುದನ್ನು ಆಡಳಿತ ಪಕ್ಷ ಹೇಳಲಿ. ಈ ಆಡಳಿತ ಪಕ್ಷದವರಿಗೆ ದಮ್ ಇಲ್ಲ, ಶಕ್ತಿ ಇಲ್ಲ, ಬಲವಿಲ್ಲ, ಸರಿಯಾದ ಯಂತ್ರವಿಲ್ಲ, ಇಲ್ಲದಿದ್ದರೆ ಅಂತಹವರ ಮೇಲೆ ಇಲ್ಲಯವರೆಗೂ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳದೆ ಏತಕ್ಕಾಗಿ ತೆಪ್ಪಗೆ ಕೂತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆಮಾಡುತ್ತೇನೆ.

ಶ್ರೀ ಕೆ. ವಿ. ಶಂಕರಗೌಡ.— ಆ ರೀತಿ ಇಲ್ಲ. ತಕ್ಕ ಕ್ರಮಗಳನ್ನು ತೆಗೆದುಕೊಂಡಿದೆ. ಕೆಲವು ಕಡೆ ಲಾಠಿ ಚಾರ್ಜು ಸಹ ಆಗಿದೆ.

ಶ್ರೀ ಜಿ. ವಿ. ಅಂಜನಪ್ಪ.—ಹಾಗಿದ್ದಪಕ್ಷದಲ್ಲಿ ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲ್ ಅವರಾದ ಶ್ರೀ ಷಡಕ್ಷರಸ್ವಾಮಿಯವರ ಮೇಲೆ ಏತಕ್ಕಾಗಿ ಲಾಠಿ ಚಾರ್ಜ್ ಮಾಡಿದ್ದಾರೆ?

Sri K. V. SHANKARA GOWDA.—That is false.

ಶ್ರೀ ಜಿ. ವಿ. ಅಂಜನಪ್ಪ.—ಅದು ಸುಳ್ಳಾದರೆ, ನಾನು ಈ ಕೂಡಲೇ ಈ ಸಭೆಗೆ ರಾಜೀನಾಮೆ ಕೊಡುತ್ತೇನೆ. 22ನೇ ತಾರೀಖಿನ ದಿವಸ ನಾನು ವೈಸ್ ಚಾನ್ಸಲರ್ ರೂಂನಲ್ಲಿ ಕೂತಿರುವಾಗ ಶ್ರೀ ಷಡಕ್ಷರಸ್ವಾಮಿಯವರಿಗೆ ಏಟು ಬಿದ್ದು ಸೊಂಟ ನೋವು ಆಗುತ್ತಿದೆಯೆಂಬುದಾಗಿ ನನ್ನ ಗಮನಕ್ಕೆ ಬಂತು. ಅದಕ್ಕೆ ಸರ್ಕಾರದವರು ಏನು ಉತ್ತರ ಹೇಳುತ್ತಾರೆ?

ಶ್ರೀ ಜೆ. ಬಿ. ಮುರ್ತಾರಾಧ್ಯ (ವಿಧಾನ ಸಭಾ ಕ್ಷೇತ್ರ).—ಶ್ರೀಮಾನ್ ಷಡಕ್ಷರಸ್ವಾಮಿಯವರನ್ನು ಹೊಡೆದದ್ದು ಸುಳ್ಳು. Sri Shadaksharaswamy owes a duty to the State and to the people to issue a contradiction. In fact, we are family friends and I was very much concerned. ಅದೂ ಅಲ್ಲದೆ ನನ್ನ ಮಗನಿಗೆ ವರ್ತಮಾನ ಬಂತು, ಅವರ ತಿಥಿಗೆ ಬನ್ನಿ ಎಂದು. ಇದೆಲ್ಲಾ ಸುಳ್ಳಾಯಿತು. He went to the Hospital for a check-up. Directly he was never hit.

ಶ್ರೀ ಜಿ. ವಿ. ಅಂಜನಪ್ಪ.—ಅವರ ಹತ್ತಿರ ಹೋಗಿ ಅಧಿಕಾರಿಗಳು ಯಾರು ಸರಿಯಾಗಿ ನೋಡುತ್ತಾರೆ? ಅವರನ್ನು ನಾವು ವಚನಭ್ರಷ್ಟರು ಎಂದು ಹೇಳಬೇಕಾಗುತ್ತದೆ.

ಶ್ರೀ ಕೆ. ವಿ. ಶಂಕರಗೌಡ.—ಹೊಡೆದಿದ್ದಾರೆಂದು ಪ್ರೂವ್ ಮಾಡಿದರೆ, ನಾವೂ ಕೂಡ ರಾಜೀನಾಮೆ ಕೊಡುತ್ತೇವೆ.

ಶ್ರೀ ಜಿ. ವಿ. ಅಂಜನಪ್ಪ.—ನಾನೂ ಸಹ ತಕ್ಕ ಪ್ರಾಯಶ್ಚಿತ್ತಕ್ಕೆ ಅರ್ಹನಾಗುತೇನೆ, ನನ್ನ ಮಾತ್ಕನಾದರೂ ಸುಳ್ಳಾದರೆ. ನಾನು 22ನೇ ತಾರೀಖು ನಾಲ್ಕುವರೆ ಘಂಟೆಗೆ ಕೆ.ಜಿ.ಎಫ್. ಸಿಂಡಿಕೇಟ್ ಬ್ಯಾಂಕಿನಿಂದ ಇಲ್ಲಿಗೆ ಬಂದು ವೈಸ್ ಚಾನ್ಸಲರನ್ನು ಮತ್ತು ರಿಜಿಸ್ಟ್ರಾರ್ ಅವರನ್ನೂ ಭೇಟಿ ಮಾಡಿದಾಗ ಅವರು ವಿದ್ಯಾರ್ಥಿಗಳು ಬರೆದ ಅರ್ಜಿಗಳನ್ನು ನೋಡುತ್ತಿದ್ದಾಗ ಬಾಗಿಲನ್ನಲ್ಲ ನಿಂತಿದ್ದಂಥ ಜವಾನನನ್ನು ಹೊಡೆದಿದ್ದಾರೆ. ಆಗ ನನಗೂ ಸ್ವಲ್ಪ ಏಟು ಬಿದ್ದಿದೆ ಎಂದು ಶ್ರೀಮಾನ್ ಷಡಕ್ಷರಸ್ವಾಮಿಯವರು ಹೇಳಿದರು. ವಿದ್ಯಾರ್ಥಿಗಳು ಯಾರು, ಸಮಾಜ ವಿರೋಧ ಶಕ್ತಿಗಳು ಯಾರು, ಅಧ್ಯಾಪಕರು ಯಾರು ಎಂಬುದನ್ನು ನೋಡತಕ್ಕ ವಿವೇಚನೆ ಇವರಿಗೆ ಬೇಡವೇ? ಶ್ರೀ ಷಡಕ್ಷರಸ್ವಾಮಿಯವರನ್ನೂ, ಶ್ರೀ ಬಿ. ಕೆ. ಹನುಮಂತಯ್ಯನವರನ್ನೂ, ಯೂನಿವರ್ಸಿಟಿಯ ಒಬ್ಬ ಲೆಕ್ಚರರನ್ನೂ ಒಬ್ಬ ಲೈಬ್ರೆರಿಯನ್ ಅವರನ್ನೂ ಮತ್ತು ಆಫೀಸಿನಲ್ಲಿರುವ ಕೆಲವು ನೌಕರರನ್ನೂ ಸಹ ಹೊಡೆದಿದ್ದಾರೆ. ಶ್ರೀ ಷಡಕ್ಷರಸ್ವಾಮಿಯವರು ಮತ್ತು ವೈಸ್ ಚಾನ್ಸಲರ್ ಅವರೇ ಇದು ಬಹಳ ಅನ್ಯಾಯ, ಇದೇನು ಪೋಲೀಸ್ ರಾಜ್ಯವೇ ಎಂದು ಹೇಳಿದರು. ಆದರೆ ಆಮೇಲೆ ನಾನು ಆ ರೀತಿಯಲ್ಲಿ ಹೇಳಲಿಲ್ಲವೆಂಬುದಾಗಿ ಅವೇನೋ ಒಂದು ತರಹ ತಪ್ಪು ವರದಿಮಾಡಿದ್ದಾರೆಂದು ಹೇಳಿದರು. ನಾನು ಈ ವಿಚಾರವಾಗಿ ಈ ಸಭೆಯಲ್ಲಿ

(ಶ್ರೀ ಜಿ. ವಿ. ಅಂಜನಪ್ಪ)

ಏನು ಮಾತನಾಡಿದರೂ ನಾನು ಇಲ್ಲಿ ಹೇಳಿರತಕ್ಕ ಸ್ಟೇಟ್‌ಮೆಂಟ್ ಏನಿದೆ ಅದನ್ನು ನಾನು ಎಂದಿಗೂ ಹಿಂದಕ್ಕೆ ತೆಗೆದುಕೊಳ್ಳುವವನಲ್ಲ. ಬೇಕಾದರೆ ಶ್ರೀ ಷಡಕ್ಷರಸ್ವಾಮಿಯವರ ಹತ್ತಿರ ನಾನು, ಶ್ರೀ ಮಾನ್ ಮಲ್ಲಾರಾಧ್ಯರು, ನೀವೂ ಎಲ್ಲರೂ ಹೋಗೋಣ. ನನ್ನ ಮಾತು ಸುಳ್ಳಾದರೆ, ಈ ನಭೆ ಹೇಳುವ ಶಿಕ್ಷೆಗೆ ನಂತೋಷದಿಂದ ಗುರಿಯಾಗುತ್ತೇನೆ.

ಇನ್ನು ಇವರು ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುತ್ತೇವೆಂದು ಬೇರೆ ಹೇಳುತ್ತಾರೆ. ಇವರು ಶಾಂತಿಯನ್ನು ಪರಿಪಾಲನೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದು ಒಂದು ಅತ್ಯಂತ ವಿಷಾದವಾದ ಹಾಗೂ ನಾಚಿಕೆಗೇಡಿನ ನಂಗತಿಯಾಗಿದೆ. ಇಪತ್ತಿನದಿವನ ನಾವು ಪ್ರಜಾಪ್ರಭುತ್ವ ದಲ್ಲಿದ್ದೇವೆಯೋ ಅಥವಾ ಪೋಲೀಸ್ ರಾಜ್ಯದಲ್ಲಿದ್ದೇವೆಯೋ ಎಂಬುದನ್ನು ಬೆಳಕಿಗೆ ತಂದು ನೋಡಿದ್ದೇ ಅದರೆ ಜನ ಇಪತ್ತಿನದಿವನ ರಸ್ತೆಗಳಲ್ಲಿ, ಬೀದಿಬೀದಿಗಳಲ್ಲಿ ಧೈರ್ಯವಾಗಿ ಓಡಾಡುವ ಹಾಗೆ ಇಲ್ಲ. ಕಾರುಗಳಿಗೆ ಕಲ್ಲು ಹೊಡೆಯುತ್ತಿದ್ದಾರೆ. ಇದು ಸರ್ಕಾರದ ನಿರ್ವೀರ್ಯತೆ ತೋರಿಸುತ್ತದೆ. ಜನಗಳ ಹಿತಾರ್ಷಣೆ, ಆಸ್ತಿಪಾಸ್ತಿ ರಕ್ಷಣೆ ಎಷ್ಟರಮಟ್ಟಿಗೆ ಕಾಪಾಡುತ್ತಾರೆಂಬುದನ್ನು ನೋಡಿದರೆ, ಇವರಿಗೆ ಜನಪ್ರಿಯರಾಗುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲವೆಂಬುದು ಗೊತ್ತಾಗುತ್ತದೆ. ಇದಕ್ಕೆ ಸ್ಪಷ್ಟವಾದ ಕಾರಣವೆಂದರೆ ಅಡಳಿತದಲ್ಲಿನ ದಕ್ಷತೆಯ ಅಭಾವವೆಂದು ನಾನು ಹೇಳುತ್ತೇನೆ. ಇದನ್ನು ನೋಡಿ ರಾಜ್ಯಪಾಲರು ಈ ದೇಶದಲ್ಲಿ ಶಾಂತಿಗೆ ಭಂಗವಿಲ್ಲ, ಎಲ್ಲೋ ಕೆಲವು ಕಡೆಗಳಿಂದ ಬಂದಿರತಕ್ಕ ನಮಾಜ ವಿರೋಧ ಶಕ್ತಿಗಳು ಈ ರೀತಿಯಾಗಿ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳು ನಮ್ಮ ವಿದ್ಯಾರ್ಥಿಗಳನ್ನು ಹಿಂದಿ ಬೇಡವೆಂದು ಚಳುವಳಿ ಮಾಡಲಿಲ್ಲ, ಅದು ವಿದ್ಯಾರ್ಥಿಗಳ ತಪ್ಪು ಅಲ್ಲ. ಎಲ್ಲೋ ಹೊರ ಪ್ರಾಂತಗಳಿಂದ ಬಂದಂಥವರು ಈ ರೀತಿ ದಾಂಧಲೆಯನ್ನು ಎಬ್ಬಿಸಿದ್ದಾರೆಂದು ಹೇಳಿದ್ದಾರೆ. ಇದಕ್ಕಿಂತಲೂ ಜವಾಬ್ದಾರಿ ರಹಿತವಾದ ಸ್ಟೇಟ್‌ಮೆಂಟ್ ಇನ್ನೊಂದು ಇಲ್ಲ. ಇವರು ಹೊರಗಡೆಯಿಂದ ಅಂದರೆ ಮದ್ರಾಸ್ ಅಥವಾ ಕೇರಳಾಗಳಿಂದ ಗೂಂಡಾಗಳು ಈ ರಾಜ್ಯಕ್ಕೆ ಬಂದು ಈ ರೀತಿ ಮಾಡುತ್ತಿದ್ದಾರೆಂದು ಹೇಳುವ ಪಕ್ಷದಲ್ಲಿ ಏತಕ್ಕೋಸ್ಕರ ಅವರ ಮೇಲೆ ಇವರು ಉಗ್ರವಾದ ಕ್ರಮಗಳನ್ನು ತೆಗೆದುಕೊಂಡಿಲ್ಲ? ಇವರಿಗೆ ಜವಾಬ್ದಾರಿಯನ್ನು ಹೊರುವುದಕ್ಕೆ ಶಕ್ತಿಯಿಲ್ಲ; ಆದ್ದರಿಂದ ಅದನ್ನೆಲ್ಲಾ ವಿರೋಧ ಪಕ್ಷದವರ ಮೇಲೆ ಹಾಕಿ ಅದರಲ್ಲಿ ವಿರೋಧ ಪಕ್ಷದವರ ಕೈವಾಡವಿದೆಯೆಂದು ಅವರನ್ನು ದೂಷಣೆ ಮಾಡುತ್ತಾರೆ. ವಿರೋಧ ಪಕ್ಷದವರೇ ವಿದ್ಯಾರ್ಥಿಗಳನ್ನು ಗಲಾಟೆ ಮಾಡುವಂತೆ ಪ್ರಚೋದನೆ ಮಾಡುತ್ತಾರೆ ಎಂದು ಹೇಳುತ್ತಾರೆ. ಯಾವಾಗ ತಮ್ಮಲ್ಲಿ ಇಂಥಾ ಒಂದು ಪರಿಸ್ಥಿತಿಯನ್ನು ತಹಬಂದಿಗೆ ತರುವುದಕ್ಕೆ ಶಕ್ತಿ ಇಲ್ಲವೋ ಆಗ ಯಾರ ಮೇಲೋ ದೋಷಾರೋಪಣೆಯನ್ನು ಹಾಕುತ್ತಾರೆ. ಇದು ಸರಿಯಲ್ಲ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದಕ್ಕಿಂತಲೂ ನಾಚಿಕೆಗೇಡಿನ ಪ್ರಸಂಗ ಇನ್ನೊಂದಿಲ್ಲ. ಯೋಜನೆ ಎಂದರೆ ಏನು? ಯೋಜನೆ ಇದೆಯೇ? 5 ವರ್ಷಗಳಿಗೊಮ್ಮೆ ಯೋಜನೆಯನ್ನು ಮಾಡಿ 3 ಪಂಚವಾರ್ಷಿಕ ಯೋಜನೆಗಳನ್ನು ಮುಕ್ತಾಯ ಮಾಡಿದರು. ಕೋಟಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿ ನೀರಿನಲ್ಲಿ ಹೋಮ ಮಾಡಿದಂತೆ ಮಾಡಿದರು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯು 1965ನೇ ಇಸವಿಯಲ್ಲಿಯೇ ಪ್ರಾರಂಭವಾಯಿತು. 1968ನೇ ಇಸವಿಯಲ್ಲಿಯೂ ಕೂಡ ಈ ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಗಾತ್ರ ಎಷ್ಟು, ಯಾವ ಯಾವ ಯೋಜನೆಗೆ ಎಷ್ಟೆಷ್ಟು ಹಣವನ್ನು ವಿನಿಯೋಗಿಸಿದ್ದಾರೆ, ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು, ಯಾವ ಗುರಿಯನ್ನು ಸಾಧನೆ ಮಾಡಬೇಕು ಎಂಬುದನ್ನು 5 ವರ್ಷಗಳಲ್ಲಿ 3 ವರ್ಷಗಳು ಕಳೆದರೂ ಇವೊತ್ತಿನವರೆಗೂ ನಿರ್ಧಾರ ಮಾಡುವುದಕ್ಕೆ ಯೋಗ್ಯತೆ ಇಲ್ಲದ ಜನ ಯೋಜನೆಗೆ ಕೋಟಿ ಗಟ್ಟಲೆ ಹಣವನ್ನು ಖರ್ಚು ಮಾಡುತ್ತೇವೆಂದು ಯಾವ ಮುಖದಿಂದ ಹೇಳುತ್ತಾರೆ? ಇಂಥವುಗಳನ್ನೆಲ್ಲಾ ಹೇಳಿ ರಾಜ್ಯಪಾಲರ ಭಾಷಣವನ್ನು ಹೊಲನು ಮಾಡಿಸುತ್ತಾರೆಯೇ ಎಂದು ನಾನು ಸರ್ಕಾರದವರನ್ನು ಕೇಳಬೇಕಾಗುತ್ತದೆ. ಸರ್ಕಾರದವರು ಯೋಜನೆಗಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆಯೋ ಅದರಿಂದ ಜನಗಳಿಗೆ ಸಾಕಷ್ಟು ಪ್ರತಿಫಲ ದೊರೆತಿದೆಯೇ, ಅದರಿಂದ ಜನಗಳಿಗೆ ಅನುಕೂಲ ವಾಗಿದೆಯೇ? ಇದಕ್ಕಿಂತಲೂ ಅನತ್ಯವಾದ ನಂಗತಿ ಇನ್ನೊಂದು ಇದೆಯೇ? ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ 3 ವರ್ಷಗಳು ಕಳೆದರೂ ಕೂಡ ಯಾವ ಯಾವ ಯೋಜನೆಗೆ ಎಷ್ಟು ಹಣವನ್ನು ಖರ್ಚು ಮಾಡಬೇಕೆಂಬುದನ್ನು ಇನ್ನೂ ನಿರ್ಧಾರ ಮಾಡಿಲ್ಲ. ಕಳೆದ ವರ್ಷ ಈ ಯೋಜನೆಗಾಗಿ 60 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ.

ಒಮ್ಮೆ ಹೇಳುತ್ತಾರೆ ಈ ನಾಲ್ಕನೆಯ ಪಂಚವಾರ್ಷಿಕಯೋಜನೆಗೆ 560 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು, ಇನ್ನೊಂದು ಸಾರಿ ಹೇಳುತ್ತಾರೆ 450 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು. ಒಂದು ವರ್ಷಕ್ಕೆ 60 ಕೋಟಿ ರೂಪಾಯಿಗಳಂತೆ ಖರ್ಚು ಮಾಡಿದರೆ 5 ವರ್ಷಗಳಿಗೆ 300 ಕೋಟಿ ರೂಪಾಯಿಗಳಾಗುತ್ತವೆ. ಯೋಜನೆಯನ್ನು ಸರಿಯಾಗಿ ಕಾರ್ಯಗತ ಮಾಡುವುದಕ್ಕೆ ಇವರಿಗೆ ಶಕ್ತಿ ಸಾಮರ್ಥ್ಯವಿಲ್ಲದಿದ್ದರೆ ಜನಗಳಿಗೇಕೆ ವಂಚನೆ ಮಾಡುತ್ತಾರೆ ? ಒಂದು ವರ್ಷಕ್ಕೆ 60 ಕೋಟಿ ರೂಪಾಯಿಗಳಂತೆ 5 ವರ್ಷಕ್ಕೆ 300 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತೇವೆ ಅದಕ್ಕಿಂತ ಹೆಚ್ಚು ಖರ್ಚು ಮಾಡುವುದಕ್ಕೆ ನಮಗೆ ಶಕ್ತಿ ಸಾಮರ್ಥ್ಯವಿಲ್ಲ, ನಮ್ಮಲ್ಲಿ ಹಣವಿಲ್ಲ ಆದ್ದರಿಂದ ಕೆಲವು ಯೋಜನೆಗಳನ್ನು ಕೈಬಿಟ್ಟಿದ್ದೇವೆಂದು ಹೇಳಲಿ. ನಮ್ಮನೆ ಜನಗಳಿಗೆ ನಾವು ಸುಖರಾಜ್ಯವನ್ನು ಸ್ಥಾಪನೆ ಮಾಡುತ್ತೇವೆ, ಈ ರಾಜ್ಯದಲ್ಲಿ ಸ್ವರ್ಗ ಲೋಕವನ್ನು ನಿರ್ಮಾಣ ಮಾಡುತ್ತೇವೆಂದು ಜನತೆಗೆ ಏತಕ್ಕೆ ಹೇಳಬೇಕು ? ಇದಕ್ಕಿಂತಲೂ ನಾಚಿಕೆಗೇಡಿನ ಕೆಲಸ ಮತ್ತೊಂದಿಲ್ಲ.

ಇನ್ನು ರಸ್ತೆ ಸಾರಿಗೆಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಬಹಳ ಹೆಮ್ಮೆಯಿಂದ ಹೇಳಿದ್ದಾರೆ. ಈ ದೇಶದ ಜನ, ಅದರಲ್ಲೂ ಬಡವರು ಸರ್ಕಾರಿ ಬಸ್ಸುಗಳಲ್ಲಿ ಯಾವ ಅಡ್ಡಿ ಆತಂಕಗಳೂ ಇಲ್ಲದೆ, ಕಡಿಮೆ ಖರ್ಚಿನಲ್ಲಿ ಆಹ್ಲಾದಕರವಾದ ಪ್ರಯಾಣ ಮಾಡುತ್ತಾರೆ ಎಂದರೆ ಇದು ಸತ್ಯಕ್ಕೆ ದೂರವಾದ ವಿಚಾರ. ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಎಷ್ಟು ಹಣ ಲೋಪವಾಗುತ್ತದೆ ಎಂಬುದನ್ನು ಯಾರಾದರೂ ಬಸ್ಸುಗಳಲ್ಲಿ ಪ್ರಯಾಣ ಮಾಡತಕ್ಕವರನ್ನು ಕೇಳಿದರೆ ಗೊತ್ತಾಗುತ್ತದೆ. ಈ ಸಾರಿಗೆ ಸಂಸ್ಥೆಗೆ ಸರ್ಕಾರದವರು ಹಾಕಿರುವ ಬಂಡವಾಳವೆಷ್ಟು, ಇದರಿಂದ ಸರ್ಕಾರಕ್ಕೆ ಬರಕಕ್ಕ ಆದಾಯ ವೆಷ್ಟು ಎಂಬುದನ್ನು ನೋಡುವುದಾದರೆ ಲಕ್ಷಗಟ್ಟಲೆ ಹಣ ವ್ಯಯವಾಗುತ್ತದೆ. ಈ ಸಂಸ್ಥೆಯಿಂದ ಜನಗಳಿಗೆ ಅನುಕೂಲ, ಸುಖ ಸಂತೋಷವನ್ನು ಕಲ್ಪನೆ ಮಾಡುವುದರ ಬದಲು ಹೆಚ್ಚಿನ ಅನ್ಯಾಯ ತೊಂದರೆಗಳು ಉಂಟಾಗುತ್ತಿವೆ. ಆದ್ದರಿಂದ ರಾಜ್ಯಪಾಲರ ಭಾಷಣದಲ್ಲಿ ಈ ಸಾರಿಗೆ ಸಂಸ್ಥೆಗೆ ಶಹಭಾಷ್‌ಗಿರಿಯನ್ನು ಕೊಟ್ಟು ಅದು ದೇಶಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸುತ್ತಿದೆ, ಪ್ರಯಾಣಿಕರಿಗೆ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ ಎಂಬುದು ಸತ್ಯಕ್ಕೆ ದೂರವಾದ ವಿಚಾರವಾಗಿದೆ. ಇದರಲ್ಲಿ ಬಹಳ ದೊಡ್ಡದಾಗಿ ಹೇಳಿದ್ದಾರೆ ಮೈಸೂರು ರಾಜ್ಯದ ರಸ್ತೆ ಸಾರಿಗೆ ನಿಗಮದಲ್ಲಿ 4 ಲಕ್ಷ್ಯುರಿ ಪ್ರವಾಸಿ ಟ್ಯಾಕ್ಸಿಗಳನ್ನು ಇಟ್ಟಿದ್ದೇವೆಂದು. ಇವುಗಳಿಂದ ಹೊರಗಡೆ ಪ್ರಾಂತದಿಂದ ಬಂದವರಿಗೆ, ವಿದೇಶ ಪ್ರವಾಸಿಗಳಿಗೆ ಅನುಕೂಲವಾಗುತ್ತದೆ. ಮತ್ತು ಇವುಗಳಲ್ಲಿ ಮಂತ್ರಿಗಳು ಪ್ರಯಾಣ ಮಾಡುತ್ತಾರೆ. ಅಧಿಕಾರಿಗಳು ಪ್ರಯಾಣ ಮಾಡುತ್ತಾರೆ. ಆದ್ದರಿಂದ ಅವುಗಳಿಂದ ಅನುಕೂಲಕ್ಕಿಂತ ದುರುಪಯೋಗ ಜಾಸ್ತಿಯಾಗುತ್ತಿದೆ. ಆದರೆ ರಾಜ್ಯಪಾಲರ ಬಾಯಿಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇವೆ ಎಂದು ಹೇಳಿಸಿದ್ದಾರೆ. ಇದು ಒಂದು ಮಹಾ ಪಾಪದ ಕಾರ್ಯವಲ್ಲದೆ ಮತ್ತೊಂದಿಲ್ಲ ಎಂದು ಹೇಳಿದರೆ ತಪ್ಪಾಗಲಾರದು.

ಇನ್ನೂ ಮಾನ್ಯ ವಿದ್ಯಾ ಸಚಿವರು ಈಗ ಇಲ್ಲಿಯೇ ಇದ್ದಾರೆ. ಇವರು ವಿದ್ಯಾಭ್ಯಾಸದ ಬಗ್ಗೆ ಎಷ್ಟೋ ಪುಟಗಳನ್ನು ಬರೆದುಕೊಂಡಿದ್ದಾರೆ. ರಾಜ್ಯಾಂಗದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ತಕ್ಷಣ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುತ್ತೇವೆ ಎಂದು ಹೇಳಿದ್ದಾರೆ. ಸ್ವಾತಂತ್ರ್ಯ ಬಂದಮೇಲೆ ಸುಮಾರು 20 ವರ್ಷಗಳ ಕಾಲ ಒಂದೇ ಪಕ್ಷದವರು ಆಡಳಿತವನ್ನು ಕೈಯಲ್ಲಿ ಇಟ್ಟುಕೊಂಡಿದ್ದಾರೆ. ರಾಜ್ಯಾಂಗ ನಿಬಂಧನೆಗನುಗುಣವಾಗಿ ದೇಶದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದು ದೇಶದ ಜನತೆಯನ್ನು ಎಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಿದ್ದಾರೆಯೇ ? ವಿದ್ಯಾವಂತರ ಸಂಖ್ಯೆ ಜಾಸ್ತಿಯಾಗಿದೆಯೇ ನಮ್ಮ ರಾಜ್ಯದಲ್ಲಿ ಎಲ್ಲರನ್ನೂ ಪದವೀಧರರನ್ನಾಗಿ ಮಾಡಿದ್ದಾರಯೇ ! ಇವರು ರಾಜ್ಯಾಂಗಕ್ಕೆ ಎಷ್ಟರ ಮಟ್ಟಿಗೆ ಮಾನ ಮರ್ಯಾದೆಯನ್ನು ಪುರಸ್ಕಾರವನ್ನು ಕೊಟ್ಟಿದ್ದಾರೆ ? ರಾಜ್ಯಾಂಗದ ವಿಧಿಗಳನ್ನು ಅನುಷ್ಠಾನಕ್ಕೆ ತಂದಿದ್ದಾರಯೇ ? ಅಮೇಲೆ ಹಾಗೆಯೇ ಮಾನ್ಯ ವಿದ್ಯಾ ಸಚಿವರು ಬಹಳ ಹೆಮ್ಮೆಯಿಂದ ಹೇಳಿದರು, ಮೈಸೂರು ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಉಚಿತ ಶಿಕ್ಷಣವನ್ನಾಗಿ ಮಾಡಿರತಕ್ಕದ್ದು ನಮ್ಮದೇ ಮೊದಲನೆಯ ಸಂಸ್ಥಾನ ಎಂದು. ಈ ರಾಜ್ಯಪಾಲರ ವಂದನಾರ್ಪಣಾ ನಿರ್ಣಯವನ್ನು ಮಂಡಿಸಿದ ಶ್ರೀಮಾನ್ ಕೆ ಸೂರ್ಯನಾರಾಯಣ ಅಡಿಗಾ ಅವರು ಮಾತನಾಡುತ್ತಾ ಪಂಜಾಬು ಮತ್ತು ಮದ್ರಾಸಿನಲ್ಲಿಯೂ ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಉಚಿತ ಶಿಕ್ಷಣವನ್ನು ಜಾರಿಗೆ ತಂದಿದ್ದಾರೆಂದು ಹೇಳಿದರು. ಈಗ ನಮ್ಮ ರಾಜ್ಯದಲ್ಲಿ ಪ್ರೌಢ ವಿದ್ಯಾಭ್ಯಾಸ ಎಷ್ಟರಮಟ್ಟಿಗೆ ಉಚಿತವಾಗಿ ನಡೆಯುತ್ತಿದೆ ಎಂದರೆ ಇದರಿಂದ ಸರ್ಕಾರಕ್ಕೇನೋ ಆದಾಯ ಕಡಿಮೆಯಾಗಿದೆ. ಸರ್ಕಾರಿ ಸ್ಕೂಲುಗಳಲ್ಲಿ ಫೀಜನ್ನು ವಸೂಲು ಮಾಡುವುದಿಲ್ಲ. ಆದರೆ ಪ್ರೈವೇಟ್ ಸ್ಕೂಲುಗಳಲ್ಲಿ ವೆಲ್‌ಫೇರ್ ಫಂಡ್, ಲೈಬ್ರರಿ ಫಂಡ್ ಸ್ಪೋರ್ಟ್ಸ್ ಫಂಡ್ ಮತ್ತು ಯೂನಿಯನ್ ಫಂಡ್ ಇತ್ಯಾದಿ ಸೇರಿ ಫೀಜಿಗಿಂತ ಹತ್ತರಷ್ಟು ಹೊಸ

(ಶ್ರೀ ಜಿ. ವಿ. ಆಂಜನಪ್ಪ)

ಹೊಸ ಫೀಜುಗಳನ್ನು ವಸೂಲು ಮಾಡುತ್ತಿದ್ದಾರೆ. ಇದರಿಂದಾಗಿ ಸರ್ಕಾರದವರು ಸೆಕೆಂಡರಿ ಶಾಲೆಗಳಲ್ಲಿ ಉಚಿತ ವಿದ್ಯಾಭ್ಯಾಸವನ್ನು ಕೊಡುತ್ತಿರುವುದರಿಂದ ಸರ್ಕಾರಕ್ಕೆ ಬರತಕ್ಕ ಆದಾಯ ಕಡಿಮೆಯಾಗಿದೆ. ಆದರೆ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಮಾತ್ರ ಸಿಕ್ಕುತ್ತಿಲ್ಲ. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದು 5—6 ವರ್ಷಗಳಾದರೂ ಕೂಡ ಅದನ್ನು ಇಪ್ಪೊತ್ತಿನವಿವನ ಕಟ್ಟುನಿಟ್ಟಾಗಿ ಪರಿಪಾಲನೆ ಮಾಡುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ 5 ವರ್ಷ, 6 ವರ್ಷ, 7 ವರ್ಷ ವಯಸ್ಸಾಗಿರತಕ್ಕ ಮಕ್ಕಳುಗಳೆಲ್ಲರೂ ಎಮ್ಮೆ ಕಾಯುವುದಕ್ಕೆ, ಬೇಸಾಯ ಮಾಡುವುದಕ್ಕೆ, ಕೂಲಿ ಮಾಡುವುದಕ್ಕೆ ಹೋಗುತ್ತಿದ್ದಾರೆ. ಸರ್ಕಾರದವರು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದರೂ ಕೂಡ ಅದು ಎಷ್ಟರ ಮಟ್ಟಿಗೆ ನಡೆಯುತ್ತಿದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಆದ್ದರಿಂದ ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದರೂ ಕೂಡ ಅದು ಯಶಸ್ವಿಯಾಗಿ ನಡೆಯುತ್ತದೆ ಎಂಬುದು ಸತ್ಯಕ್ಕೆ ದೂರವಾದ ವಿಚಾರ. ಇದು ಬರೀ ಪುಸ್ತಕದಲ್ಲಿರುವ ಬದನೇಕಾಯಿ. ಇದು ಕಾರ್ಯತಃ ಯಶಸ್ವಿಯಾಗಿ ನಡೆಯುತ್ತ ಇಲ್ಲ. ನಮ್ಮ ರಾಜ್ಯದ ಪ್ರತಿಯೊಬ್ಬ ಮಕ್ಕಳೂ ವಿದ್ಯಾವಂತರಾಗಿಲ್ಲ. ಕಡ್ಡಾಯ ಶಿಕ್ಷಣ ಸರಿಯಾಗಿ ನಡೆಯುತ್ತಿಲ್ಲ. ಸರ್ಕಾರ ಈ ವಿಚಾರದಲ್ಲಿ ನುಮ್ಮನೆ ಕಣ್ಣು ಮುಚ್ಚಿಕೊಂಡು ಕೈ ಕಟ್ಟಿಕೊಂಡು ಕುಳಿತುಕೊಂಡಿದೆ ಎಂದು ನಾನು ಹೇಳಬೇಕಾಗಿದೆ.

ಅಮೇಲೆ ಹಾಗೆಯೇ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ, ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಮತ್ತು ನರ್ಕಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನಲ್ಲಿ ಕನ್ನಡ ಪಾಠ್ಯಮ ವಿಭಾಗವನ್ನು ತೆರೆದಿವ್ವಾರೆ. ಪದವಿ ತರಗತಿಯಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳನ್ನು ಐಚ್ಛಿಕ ವಿಷಯಗಳನ್ನಾಗಿ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಸರ್ಕಾರದವರು ವರ್ಷವೊಂದಕ್ಕೆ 500 ರೂಪಾಯಿಯ 20 ವಿದ್ಯಾರ್ಥಿ ವೇತನಗಳನ್ನು ಏರ್ಪಡಿಸಿದ್ದಾರೆ ಎಂದು. ಇದು ಬಹಳ ದೊಡ್ಡ ಕೆಲಸ ಹಾಗಾದರೆ ಇವರಿಗೆ ಕನ್ನಡದಲ್ಲಿ ಅಭಿಮಾನವಿದ್ದರೆ, ಒಲುಮೆ ಇದ್ದರೆ ಕನ್ನಡವನ್ನು ರಾಜ್ಯಭಾಷೆಯಾಗಿ ಮಾಡಬೇಕು, ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕು, ಪ್ರತಿ ಯೊಂದು ವ್ಯವಹಾರವೂ ಕನ್ನಡದಲ್ಲಿ ನಡೆಯುವಂತೆ ಮಾಡಬೇಕು. ಕನ್ನಡ ಕಲಿಯತಕ್ಕ ಪ್ರತಿಯೊಬ್ಬನಿಗೂ ಆ ವೇತನವನ್ನು ಕೊಡುತ್ತಿದ್ದರೆ ನಾನು ಅದನ್ನು ಒಪ್ಪುತ್ತಿದ್ದೆ. ಇದನ್ನು 20 ವಿದ್ಯಾರ್ಥಿಗಳಿಗೆ ಕೊಟ್ಟು ನಾವು ಕನ್ನಡಕ್ಕೆ ಉತ್ತೇಜನ ಕೊಟ್ಟಿದ್ದೇವೆ ಎಂದು ಹೇಳುವುದು, ಇದು ಜನರನ್ನು ವೋನ ಮಾಡುವುದೆಂದು ಹೇಳಬಹುದು.

ಮತ್ತು ಇಲ್ಲಿಯ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಇರತಕ್ಕ ವೋನ, ನಡೆಯುತಕ್ಕ ಅನ್ಯಾಯ, ದಗ ಪ್ರಪಂಚದ ಯಾವ ದೇಶದಲ್ಲೂ ನಡೆಯುವುದಿಲ್ಲವೆಂದು ಹೇಳಬಹುದು. ಅಲ್ಲ ನಡೆಯುತ್ತಿರುವ ಸಂಗತಿಗಳನ್ನು ಮಾನ್ಯ ವಿದ್ಯಾಮಂತ್ರಿಯವರ ಗಮನಕ್ಕೆ ತಂದಾಗ್ಯೂ, ಅದು ಬರೇ ಗೋರ್ಕಲ್ಲ ಮೇಲೆ ಮಳೆ ಬಂದ ಹಾಗೆ ಆಗಿದೆ. ವಿದ್ಯಾಮಂತ್ರಿಗಳಿಂದ ಅದಕ್ಕೆ ಯಾವ ಒಂದು ಉತ್ತರವೇ ಬಂದಿಲ್ಲ. ಅಲ್ಲ ನಡೆಯುತ್ತಿರುವ ಜಾತೀಯತೆಯಲ್ಲಿ ಅನರ್ಹತೆಯುಳ್ಳವರಿಗೆ ಬೇಕಾದ ಹುದ್ದೆಗಳನ್ನು ಕೊಡುತ್ತಿದ್ದಾರೆ.

Sri K. V. SHANKARA GOWDA.—It is an autonomous body. He is on the Syndicate. It is a reflection on his own ability to say these things.

Sri G. V. ANJANAPPA.—Just because I happen to be a member of the Syndicate, whatever omissions or commissions are committed by it, how can I be responsible for them ?

Sri K. V. SHANKARA GOWDA.—The Government cannot interfere. You are a member ef the Syndicate. You must be able to check these things.

Sri G. V. ANJANAPPA.—If I am unable to do that, the Government should check it being the supreme authority under the University Act. ಮಂತ್ರಿಗಳು ಹೇಳುವುದು ಅರ್ಥವಾಗದ ವಿಚಾರ. ನಾಳೆಯ ದಿವಸ ಯೂನಿವರ್ಸಿಟಿ

ಯಲ್ಲಿ ಫ್ರೆಂಚ್ ಮಾಡಿಯಂ ಶುರು ಮಾಡಬೇಕೆಂದರೆ ಮಾಡಬಹುದೋ? ಇವರಿಗೆ ಏನು ಬೇಕಾದರೂ ಮಾಡಬಹುದೋ? ಅವರಿಗೆ ಬೇಕಾದ ಮೈಸ್ ಚಾನ್ಸಲರ್ ನೇಮಕ ಮಾಡಬಹುದೋ? ಶಾಸನಕರು ಯೂನಿವರ್ಸಿಟಿ ಕಾನೂನನ್ನು ರಚನೆ ಮಾಡಿದ್ದಾರೆ.

Sri J. B. MALLARADHYA.—I think it is even now open to my friend Mr. Anjanappa to invoke the visitorial powers of the Government. The Government is not so helpless. If a situation like that arises, the extreme power of the Government has got to be exercised and the Government can certainly interfere if things are so bad as that. In fact, I was surprised to learn that in connection with all these disturbances, an emergent meeting of the Senate which is the supreme sovereign body was not called for any consultation and the Vice-Chancellor thought that it is a matter concerning himself and the principals and none of the parents or the Senate which is the supreme body. In fact, not a single day did it occur to the Vice-Chancellor to call an emergency meeting and take decision on policy matters. In fact, it seems only the principals and the Vice-Chancellor are the persons that could deliver the goods.

ಶ್ರೀ ಜಿ. ವಿ. ಆಂಜನಪ್ಪ.—ಆದ್ದರಿಂದ ವಿದ್ಯಾಸಚಿವರು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ, ವಿಶ್ವವಿದ್ಯಾನಿಲಯವೆಂದರೆ, super sovereign body ಅಲ್ಲ; ಇವರು ನಾಳೆ.....

ಶ್ರೀ ಕೆ. ವಿ. ಶಂಕರಗೌಡ.—ಇವರು ಒಂದು ನೇಮಕದ ವಿಚಾರದಲ್ಲಿ ರೆಫರ್ ಮಾಡಿ ಹೇಳುತ್ತಿದ್ದಾರೆ. ಅದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿ ನೇಮಕ ಮಾಡಿದೆ, ಅವರ ಅಭಿಪ್ರಾಯದಂತೆ ಮಾಡಿದೆ. ಇವರು ಇವರ ಜಾತಿಗೆ ಕೊಡಬೇಕೆಂದು ಹೇಳುವುದು, ಇನ್ನೊಬ್ಬರು ಅವರ ಜಾತಿಗೆ ಕೊಡಬೇಕೆಂದು ಹೇಳುತ್ತಿರುವುದು, ಇದೆಲ್ಲಾ ಹೇಗೆ ಮಾಡುವುದಕ್ಕಾಗುತ್ತದೆ!

ಶ್ರೀ ಜಿ. ವಿ. ಆಂಜನಪ್ಪ.—ಯೂನಿವರ್ಸಿಟಿ ಸಿಂಡಿಕೇಟಿನವರ ಒಂದು ಎಕ್ಸ್‌ಪರ್ಟ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಬಹುದು. ಅವರು ಸೆಲೆಕ್ಟ್ ಮಾಡತಕ್ಕವರನ್ನು ಸಿಂಡಿಕೇಟ್ ಒಪ್ಪಬಹುದು, ಒಪ್ಪದಿರಲೂಬಹುದು.

Sri M. P. L. SASTRY (Nominated).—The governance of the University is according to the Act of the Legislature as passed and if the autonomy or the independence of the University is touched, responsible men in the country would not tolerate it. Centres of higher learning should be allowed to manage themselves. It is in that spirit that the Government will not interfere in the day to day administration, nor under the law, the Government is entitled to interfere. If law is not given effect to and if it is not implemented and things have gone to such an extent, then only visitorial powers can be invoked and not according to the whims and fancies of individual members or group of members. Therefore, University is to be respected and it should not be drawn into discussion unless it is absolutely necessary. The sanctity of University should be maintained.

ಶ್ರೀ ಜಿ. ವಿ. ಆಂಜನಪ್ಪ.—ಅಲ್ಲಿರುವ ಅಕ್ರಮಗಳು, ಅನ್ಯಾಯಗಳು ಹೊರಗಡೆಯಿಂದ ಇಷ್ಟು ಕಂಡು ಬಂದರೆ, ಅದನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಇದಕ್ಕೆ ಸರ್ಕಾರದವರು ಅಷ್ಟು ನಿಸ್ಸಹಾಯಕರಾಗಲು ಕಾರಣವಿಲ್ಲ.

Sri K. R. ACHAR (Legislative Assembly Constituency).—If the case of the Hon'ble Member is that visitorial powers should be utilised and the Government have failed, he must point out why the Government should use visitorial powers. Without saying that, if he simply says they have done this and they have done that and so visitorial powers should be invoked, it won't do. Let him make it clear where visitorial powers should have been exercised.

Sri G. V. ANJANAPPA.—I have made it very clear. ಈಗ ಬೆಂಗಳೂರು ಯೂನಿವರ್ಸಿಟಿ ಆಕ್ಟಿನಲ್ಲಿ ಪ್ರತಿಯೊಂದು ಸೆಕ್ಷನ್ನಿನಲ್ಲಿ ನಾಕಪ್ಪು ಪ್ರೊವಿಜನ್ ಇದೆ. ಸರ್ಕಾರ ಅದರಲ್ಲಿ ಪ್ರವೇಶ ಮಾಡಬಹುದು. ಅಲ್ಲಿ ನೇಮಕದಲ್ಲಿ ಅನೇಕರಿಗೆ, ಅರ್ಹತೆ ಇಲ್ಲದವರಿಗೆ ನೇಮಕ ಮಾಡಿದ್ದಾರೆ, ಅವರಿಗೆ ಎಷ್ಟು ಬೋಗ್ಯತೆ ಇದೆ, ಎಷ್ಟು ಅವರಿಗೆ ಸಂಬಳ ಸಾರಿಗೆ ಇದೆ, ಅವಕ್ಕಿಂತ ಹೆಚ್ಚಿನದು ಕೊಟ್ಟಿದ್ದಾರೆ. ನಾನು ಮಾಡಿರುತಕ್ಕ ಆಪಾದನೆ ನಿರಾಧಾರವಾಗಿರುವುದಾದರೆ, ಅದಕ್ಕೆ ಒಂದು ವಿಚಾರಣೆಯ ಸಮಿತಿಯನ್ನು ಮಾಡಲಿ, ಅವರ ಮುಂದೆ ಹೇಳುತ್ತೇನೆ.

Sri J. B. MALLARADHYA.—I have made it clear that if things are so bad, my friend Mr. Anjanappa could have made out an unambiguous case to exercise the visitorial powers by the Government. Two allegations are made, one against the Vice Chancellor personally and another against the Government. If really things are so bad, I will plead with my friend Mr. Anjanappa to tell the Government that here is a case which is fit for their interference and if they fail to act in accordance with the visitorial powers, then a case is made out for damning the Government and the Vice Chancellor on the floor of this House.

ಶ್ರೀ ಜಿ. ವಿ. ಅಂಜನಪ್ಪ.—ನಾನು ಯಾವ ಒಂದು ಪ್ರಯತ್ನ ಮಾಡಬೇಕು, ಅದನ್ನು ಮಾಡಿದೆ. ಒಂದು ನಿದರ್ಶನವೆಂದರೆ, ಮಾನ್ಯ ಸಚಿವರ ಗಮನಕ್ಕೆ ಇದನ್ನು ತಂದಿದ್ದೇನೆ, ರಾಜ್ಯಪಾಲರನ್ನು ಖುದ್ದಾಗಿ ಭೇಟಿಮಾಡಿ ತಿಳಿಸಿದ್ದೇನೆ. ಅವರೂ, ನಮ್ಮ ಕೈಯಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ ಅದು ಅಟಾನಮಸ್ ಬಾಡಿ ಎಂದು ಹೇಳುತ್ತಾರೆ. ಇಂಥ ಸಂದರ್ಭಗಳಲ್ಲಿ ಸರ್ಕಾರದವರು ಪ್ರವೇಶ ಮಾಡಬೇಕು. ಕಾನೂನು ದೇಶದ ಹಿತದೃಷ್ಟಿಯಿಂದ, ಮಾಡಬೇಕು. ಸ್ವಯಂ ಅಡಳಿತವನ್ನು ಯೂನಿವರ್ಸಿಟಿಗೆ ಕೊಟ್ಟರೆ, ಅವರು ತಮ್ಮ ಮನಸ್ಸಿಗೆ ಬಂದ ಹಾಗೆ ಬೇಕಾದರೆ ಕೆಲಸಗಳಿಗೆ ನೇಮಕ ಮಾಡಬಹುದು. ಆದ್ದರಿಂದ ಬೆಂಗಳೂರು ಯೂನಿವರ್ಸಿಟಿಯ ವಿಚಾರದಲ್ಲಿ ಒಂದು ವಿಚಾರಣೆ ಸಮಿತಿಯನ್ನು ಮಾಡಿದರೆ, ಎಲ್ಲಾ ವಿಚಾರಗಳೂ ಬೆಳಕಿಗೆ ಬರುತ್ತದೆ. ಅಲ್ಲಿ ಕೆಲವರದ್ದೇ ಅಸ್ತಿಯಾಗಿದೆ. ಎಷ್ಟೋ ವಿಚಾರಗಳನ್ನು ಅವರು ಸಿಂಡಿಕೇಟಿಗೆ ತರುವುದಿಲ್ಲ. ಅವರಲ್ಲೂ ಸಿಂಡಿಕೇಟಿನಲ್ಲಿ ಯಾರು ವಿರೋಧ ಮಾಡುತ್ತಾರೆ, ಅವರ ಗಮನಕ್ಕೆ ಮೊದಲೇ ತರುವುದಿಲ್ಲ ವಿಶ್ವವಿದ್ಯಾನಿಲಯದಲ್ಲಿ ಒಂದು ಇನ್‌ನ್ಫ್ಲುಯೆನ್ಸ್ ಬೇರೆ ಕೊಟ್ಟಿದ್ದಾರೆ. ಏನೆಂದರೆ, ಆಂಜನಪ್ಪನವರ ಹತ್ತಿರ ಹೆಚ್ಚು ವಿಚಾರ ಯಾರೂ ಮಾತನಾಡಬಾರದು, ಎಂದು. ಯಾರಾದರೂ ಆಂಜನಪ್ಪನವರ ಹತ್ತಿರ ಮಾತನಾಡಿದರೆ, ಅವರಿಗೆ ನಾನಾ ತರದ ಕಿರುಕುಳವನ್ನು ಕೊಡುತ್ತಿದ್ದಾರೆ. ಉದಾಹರಣೆಗೆ ಎಕನಾಮಿಕ್ಸ್ ಪ್ರೊಫೆಸರ್ ವೆಂಕಟಗಿರಿ ಗೌಡರನ್ನು ಆ ಸ್ಥಾನಕ್ಕೆ ಎಧಿಯಿಲ್ಲದೆ ನೇಮಕ ಮಾಡಿದರು. ಅವರಿಗೆ ನೂರಾರು ಕಿರುಕುಳಗಳನ್ನು ಕೊಟ್ಟಿದ್ದಾರೆ. ಇಪ್ಪೊತ್ತಿನ ದಿವಸ ವಿಶ್ವವಿದ್ಯಾನಿಲಯದಲ್ಲಿ ಮಾಡುತ್ತಿರುವ ನೇಮಕಗಳು ನಿಯಮಾಗಿಲ್ಲ ಮತ್ತು ನೀತಿ ನಿಯಮಗಳಿಗನುಸಾರವಾಗಿ ಮಾಡುತ್ತಿಲ್ಲ. ದೇಶದ ಜನಗಳ ಹಿತದೃಷ್ಟಿಯಿಂದ ವಿದ್ಯಾಸಂಸ್ಥೆಗಳ ಗೌರವವನ್ನು ಕಾಪಾಡುವ ದೃಷ್ಟಿಯಿಂದ ಇಂತಹ ಕೆಲಸಗಳನ್ನು ಮಾಡಬಾರದು. ಈಗಿರುವ ವೈಸ್ ಚಾನ್ಸಲರ್‌ರವರು ಇಲ್ಲಿರುವ ಸಿಂಡಿಕೇಟಿಗೆ ಹಾಗೂ ಸೆನೆಟ್ಟಿಗೆ ಕೂಡ ಯಾವ ವಿಚಾರಗಳನ್ನು ತರುತ್ತಿಲ್ಲ. ನಿಯಮಗಳಿಗನುಸಾರವಾಗಿ ಯಾವ ರೀತಿಯಾದ ನಿರ್ಣಯ ತೆಗೆದುಕೊಳ್ಳಬೇಕು ಎಂದು ಇವೆಯೋ ಅದರಂತೆ ಕಾರ್ಯ ನಿರ್ವಹಣೆ ಮಾಡದೆ ಎಲ್ಲವನ್ನೂ ತಮಗೆ ಇಷ್ಟಬಂದಂತೆ ನಡೆಸುತ್ತಾ ಬರುತ್ತಿದ್ದಾರೆ. ಇಂತಹ ಕೆಲಸಗಳು ಇಲ್ಲಿ ನಡೆಯಲು ಅವಕಾಶ ಕೊಡಕೂಡದು ಎಂದು ಇಲ್ಲಿ ನಾನು ಮಾನ್ಯ ವಿದ್ಯಾಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇಂತಹ ಅನ್ಯಾಯದ ಕೆಲಸಗಳನ್ನು ಮಾಡಲು ಬಂಡಿತ

ಅವಕಾಶ ಮಾಡಿಕೊಡಕೂಡದು. ಇದರ ಬಗ್ಗೆ ನಾನು ಕೂಡ ಬರವಣಿಗೆಯಲ್ಲಿ ವಿದ್ಯಾಮಂತ್ರಿಗಳಿಗೆ ಕೂಡ ತಿಳಿಸಿದ್ದೇನೆ ಮತ್ತು ಇನ್ನೂ ಅನೇಕ ಸಂದರ್ಭಗಳಲ್ಲೂ ಅವರ ಗಮನಕ್ಕೆ ಕೆಲವು ವಿಚಾರಗಳನ್ನು ತಿಳಿಸಿದ್ದೇನೆ. ಮತ್ತು ಅವರ ಗಮನಕ್ಕೂ ತಂದಿದ್ದೇನೆ. ಆದರೆ ಅವರು ಇದು ನ್ಯಾಯ ವಾಡಳಿತವಾದ ಸಂಸ್ಥೆ. ಇದರ ಬಗ್ಗೆ ಸರಕಾರ ಪ್ರಪೇಶಿಸುವುದು ಸರಿಯಲ್ಲ ಎಂದೂ ಹೇಳಿದರು. ಆದರೆ ಸರಕಾರದ ಕಾನೂನಿನಲ್ಲಿ ಇರುವ ಚೌಕಟ್ಟಿನೊಳಗೆ ಅವರ ಅಧಿಕಾರವನ್ನೂ ಕೊಟ್ಟಿದ್ದೆ. ಅದರಂತೆ ಪ್ರವೇಶ ಮಾಡಬೇಕು ಎಂದು ಒತ್ತಾಯ ತಂದರೂ ಸರಕಾರ ಇದರ ಬಗ್ಗೆ ಯಾವ ಕಾರ್ಯ ಕ್ರಮವನ್ನೂ ತೆಗೆದುಕೊಳ್ಳದೇ ಇರುವುದು ಬಹು ವಿಷಾದದ ಸಂಗತಿ ಎಂದು ಇಲ್ಲಿ ಹೇಳಬೇಕಾಗಿ ಬಂದಿದೆ. ಇದರಿಂದ ದೇಶದ ಜನತೆಗೂ ಬಹಳ ಹಾನಿಯಾಗುತ್ತಿದೆ.

ಇನ್ನು ರಾಜ್ಯಪಾಲರು ಅವರ ಭಾಷಣದಲ್ಲಿ ಋತುಮಾನಸ್ಥಿತಿ ಹಾಗೂ ಪರಿಹಾರ ಕಾರ್ಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅತಿವೃಷ್ಟಿಯಾಗಲೀ, ಅನಾವೃಷ್ಟಿಯಾಗಲೀ, ಬರಗಾಲವಾಗಲೀ, ಯಾವ ಕಾಲದಲ್ಲೇ ಆದರೂ ಕಾಂಗ್ರೆಸ್ ಸರಕಾರದವರು ಕೊಡುವ ಕಾರಣಗಳು ಒಂದೇ ರೀತಿಯಾಗಿರುತ್ತವೆ. ಸಕಾಲಕ್ಕೆ ಮಳೆ ಬರಲಿಲ್ಲ ಅದರಿಂದ ಆಹಾರ ಧಾನ್ಯ ಬೆಳೆಯಲು ಆಗಲಿಲ್ಲ ಎಂದು ಹೇಳುತ್ತಾರೆ. ಆಹಾರ ಧಾನ್ಯಗಳನ್ನು ಜಾಸ್ತಿ ಬೆಳೆಯಲು ಮಳೆಯಿಲ್ಲ ಕಾರಣ. ದೇಶದ ಆಡಳಿತ ದಲ್ಲಿರುವ ಅದಕ್ಷತೆಯೇ ಕಾರಣ. ಇರುವ ಮೆಷಿನರಿ ಯೋಜನೆಗಳಿಗನುಸಾರವಾಗಿ ಕಾರ್ಯಕ್ರಮಕ್ಕೆ ಅನುಗುಣವಾಗಿ ಕೆಲಸ ಮಾಡಿದ್ದಿದ್ದರೆ ಮತ್ತು ಸರಕಾರದವರು ಅವರ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸಿದ್ದಿದ್ದರೆ ಇಂದು ಈ ದೇಶದಲ್ಲಿ ಆಹಾರದ ಅಭಾವ ಪರಿಸ್ಥಿತಿ ಇಷ್ಟು ಬರುತ್ತಿರಲಿಲ್ಲ. ಈ ಭಾಷಣದಲ್ಲೇ ಹೇಳಿರುವಂತೆ ಸುಮಾರು 2.83 ಲಕ್ಷ ಎಕರೆಗೆ ನೀರಾವರಿ ಸೌಲಭ್ಯವನ್ನು ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಇದರಂತೆ ಸುಮಾರು ಒಂದು ಎಕರೆಗೆ ಕನಿಷ್ಠ ಪಕ್ಷ ಐದು ಕ್ವಿಂಟಾಲುಗಳಷ್ಟು ದವಸವನ್ನು ಬೆಳೆದರೂ ಸುಮಾರು ಹನ್ನೊಂದು ಲಕ್ಷ ಕ್ವಿಂಟಾಲುಗಳಷ್ಟು ಹೆಚ್ಚುವರಿ ದವಸ ಬೆಳೆಯಬಹುದಾಗಿತ್ತು. ಆದರೆ ಆ ರೀತಿ ಬೆಳಗಳೇ ಆಗಲಿಲ್ಲ. ಇದರಿಂದ ದೇಶದಲ್ಲಿ ಹೆಚ್ಚು ಆಹಾರ ದವಸಗಳನ್ನು ಬೆಳೆದಂತಾಯಿತೇ? ಇದರ ಬಗ್ಗೆ ಸರಕಾರ ಗಮನ ಕೊಡಬೇಕು. ನುಮ್ಮನೆ ಬಾಯಲ್ಲಿ ಹೆಚ್ಚು ಆಹಾರದ ಉತ್ಪಾದನೆಯನ್ನು ಮಾಡಬೇಕೆಂದು ಹೇಳು ತ್ತಿದ್ದೀರಿ. ಆದರೆ ಇಲ್ಲಿ ಸರಕಾರ ಹೇಳುವ ವರದಿಯಂತೆ ಸುಮಾರು ಎರಡು ಲಕ್ಷ ಟನ್ನುಗಳಷ್ಟು ಕೊರತೆ ಇದೆ. ಆದರೆ ನಮ್ಮ ಆಹಾರ ಮಂತ್ರಿಗಳು ಹೇಳುವಂತೆ ನೋಡಿದರೆ ಈ ದೇಶದಲ್ಲಿ ಸ ಮಾರು ನಾಲ್ಕು ಲಕ್ಷದಷ್ಟು ದವಸದ ಕೊರತೆ ಇದೆ ಎಂದು ತಿಳಿದುಬರುತ್ತದೆ. ಇದರಿಂದ ಆಹಾರದ ದವಸದ ಬಗ್ಗೆ ಹೇಳುತ್ತಿರುವ ಮಾತುಗಳು ಸತ್ಯಕ್ಕೆ ಬಹಳ ದೂರವಾದ ಮಾತುಗಳು ಎಂದು ಇಲ್ಲಿ ಹೇಳಲೇಬೇಕಾಗಿದೆ. ನಿಮ್ಮ ವರದಿಯಲ್ಲೇ ಹೇಳಿರುವಂತೆ ಸುಮಾರು 2.83 ಲಕ್ಷ ಎಕರೆಗೆ ನೀರಿನ ಸೌಕರ್ಯವನ್ನು ಮಾಡಿಕೊಟ್ಟಿದ್ದರೆ ಸುಮಾರು ಒಂದು ಎಕರೆಗೆ ಐದು ಕ್ವಿಂಟಾಲು ಗಳಷ್ಟು ದವಸದ ಬೆಳೆ ಬರುತ್ತದೆ ಎಂದು ಇಟ್ಟುಕೊಂಡರೂ ಇದರಿಂದ ಸುಮಾರು ಹನ್ನೊಂದು ಲಕ್ಷ ಕ್ವಿಂಟಾಲುಗಳಷ್ಟು ಹೆಚ್ಚು ದವಸ ಪಡೆಯಲು ಅವಕಾಶವಿತ್ತು. ಮತ್ತು ಇಷ್ಟು ಕೊರತೆಯೂ ಬರುತ್ತಿರಲಿಲ್ಲ. ಇದಕ್ಕೆಲ್ಲಾ ಋತುಮಾನದ ಹಾಗೂ ಮಳೆ ಬರಲಿಲ್ಲ ಎಂದು ಕ್ಷಾಮಡಾಮರಗಳ ಪರಿಸ್ಥಿತಿಗಳನ್ನು ಕಾರಣವಾಗಿ ಇಲ್ಲಿ ಹೇಳುವುದು ಸತ್ಯಕ್ಕೆ ದೂರವಾದ ಮಾತುಗಳು ಎಂದು ಇಲ್ಲಿ ಹೇಳದೆ ವಿಧಿಯಿಲ್ಲ.

ಮತ್ತು ಕ್ಷಾಮಕ್ಕೆ ತುತ್ತಾಗಿರುವ ಜನರಿಗಾಗಿ ಎಲ್ಲೆಲ್ಲಿ ಜನಗಳಿಗೆ ಪರಿಹಾರ ಕಾರ್ಯಕ್ರಮ ಗಳನ್ನು ಕೈಗೊಂಡಿದ್ದಾರೆ ಎಂದರೆ ಎಲ್ಲ ಇವರಿಗೆ ಬೇಕಾದವರು ಇವರ ಬಾಲಬಡುಕರು ಎಂದರೆ ಪುಢಾರಿಗಳು ಇರುತ್ತಾರೋ ಅಂತಹ ಕಡೆಗಳಲ್ಲಿ ರಸ್ತೆಗಳನ್ನು ಮಾಡುವುದು, ಕಾಲುವೆಗಳನ್ನು ಮಾಡಿಸುವುದು ಇಲ್ಲವೇ ಸಣ್ಣಪುಟ್ಟ ಒಡ್ಡುಗಳನ್ನು ಕಟ್ಟಿಸುವುದು, ಸಾಯಿಲ್ ಕನ್‌ಸರ್‌ವೇಷನ್ ಇತ್ಯಾದಿ ಕೆಲಸಗಳನ್ನು ಮಾಡುತ್ತಾರೆ. ಆದರೆ ದೇಶದ ಜನರ ಹಿತದೃಷ್ಟಿಯಿಂದ ಎಲ್ಲಿ ಅವಶ್ಯವಾಗಿ ಮಾಡಬೇಕೋ ಅಲ್ಲಿ ಮಾಡುತ್ತಿಲ್ಲ. ಎಲ್ಲಿ ದೇಶದ ಜನರಿಗೆ ಕಲ್ಯಾಣವಾಗುತ್ತದೋ ಅಂತಹ ಕಡೆಗಳಲ್ಲಿ ಈ ಕೆಲಸಗಳನ್ನು ಮಾಡುತ್ತಿಲ್ಲ. ಎಲ್ಲವನ್ನೂ ತಮಗೆ ಬೇಕಾದವರಿಗಾಗಿ, ಅವರು ಇರುವ ಕಡೆಗಳಲ್ಲೆ ಮಾಡುತ್ತಿದ್ದಾರೆ. ಹೀಗೆ ಮಾಡಿದರೆ ದೇಶದ ಜನತೆಗೆ ಅನುಕೂಲ ಮಾಡಿಕೊಡುತ್ತಿಲ್ಲ ಎಂದು ಹೇಳಿದರೆ ಅದು ತಪ್ಪಾಗಲಾರದು.

ಇನ್ನು ಆಹಾರದ ನೀತಿಯ ಬಗ್ಗೆ ಇಲ್ಲೇ ಬೇಕಾದಷ್ಟು ಮಾತಾಡುತ್ತಿದ್ದಾರೆ. ಈ ದೇಶದಲ್ಲಿ ಆಹಾರದ ಕೊರತೆ ಜಾಸ್ತಿಯಾಗುತ್ತಿದೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ದೇಶದ ಜನರ ಬೇಡಿಕೆಗಳಂತೆ ಇಂದು ದೇಶದಲ್ಲಿ ಸರಬರಾಯಿ ಮಾಡುವುದಕ್ಕೆ ಆಗುತ್ತಿಲ್ಲ ಎಂದು ಇಲ್ಲಿ ಲೆಕ್ಕಗಳನ್ನು ಕೊಡುತ್ತಿದ್ದಾರೆ. ಅವರು ಹೇಳುವ ಲೆಕ್ಕದಂತೆ ಸಾಮಾನ್ಯವಾಗಿ ಒಬ್ಬರಿಗೆ ಬೇಕಾಗುವ ಅಕ್ಕಿಯೇ ಆಗಲೀ ಗೋಧಿಯೇ ಆಗಲೀ ಸಕ್ಕರೆಯೇ ಆಗಲೀ ಯಾವ ರೀತಿಯಾಗಿ ಹಂಚುತ್ತಿದ್ದಾರೆ ಎನ್ನುವುದು

(ಶ್ರೀ ಜಿ. ವಿ. ಅಂಜನಪ್ಪ)

ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಇದರ ಬಗ್ಗೆ ಸರಿಯಾದ ಕಾರ್ಯಕ್ರಮಗಳನ್ನೇನಾದರೂ ತಗೆದುಕೊಂಡಿದ್ದೀರಾ? ಇವೊತ್ತಿನ ದಿವಸ ಬಳಕೆ ಮಾಡುವವರಿಗೆ ಹಾಗೂ ಬೆಳೆ ಬೆಳೆಯುವ ಗ್ರಾಹಕರಿಗೆ ಸರಕಾರ ಸಾಕಷ್ಟು ಉತ್ತೇಜನ ಕೊಡುತ್ತಿಲ್ಲ. ಮಾನ್ಯ ಆಹಾರ ಮಂತ್ರಿಗಳು ತಂದಿರುವ ಲೆವಿ ಪದ್ಧತಿಯಿಂದ ಜನಕ್ಕೆ ಬಹಳ ತೊಂದರೆಯಾಗುತ್ತಿದೆ. ಇಂತಹ ಲೆವಿಯನ್ನು ವಸೂಲು ಮಾಡುವಾಗ ಯಾವುದಾದರೂ ಒಂದು ನೀತಿ ಇದೆಯೇ ಅಥವಾ ನಿಯಮವಿದೆಯೇ? ಏನೂ ಬೆಳೆ ಮಾಡದೇ ಇದ್ದರೂ ಕೂಡ ಅಂತಹವರಿಂದ ಲೆವಿಯಾಗಿ ನಲವತ್ತೈದು ಐವತ್ತು ರೂಪಾಯಿನವರೆಗೆ ಕೊಡ ಬೇಕೆಂದು ವಸೂಲು ಮಾಡಿದ್ದಾರೆ. ಆಹಾರ ಮಂತ್ರಿಗಳೇನೋ ಇಲ್ಲ ಬೆಳೆ ಇಲ್ಲದೇ ಇರುವವರಿಂದ ಲೆವಿ ವಸೂಲು ಮಾಡಕೂಡದು ಎಂದು ಹೇಳುತ್ತಾರೆ. ಆದರೆ ಅದರಂತೆ ಅಧಿಕಾರಿಗಳು ನಡೆಸುತ್ತಿಲ್ಲ. ಈಗ ಬಳಕೆದಾರರಿಗೆ ಮಾರುತ್ತಿರುವ ಬೆಲೆ ಒಂದು ಕ್ವಿಂಟಾಲಿಗೆ 95 ರಿಂದ ನೂರು ರೂಪಾಯಿಗಳ ವರೆಗೆ ಎಂದು ಮಾಡುವಾಗ ಸರಕಾರವೇ 50 ರೂಪಾಯಿಗಳಷ್ಟು ಲಾಭ ಪಡೆಯುತ್ತಿದೆ. ಆದರೆ ಒಬ್ಬ ವರ್ತಕ ಅವನ ಮಾಲನ್ನು ಒಂದು ರೂಪಾಯಿ ಅಥವಾ ಎರಡು ರೂಪಾಯಿಗಳಷ್ಟು ಹೆಚ್ಚು ಇಟ್ಟು ಮಾರಿದರೆ ಅವನು ಬ್ಲಾಕ್ ಮಾರ್ಕೆಟೀರ್ ಹಾಗೂ ಕಾಳಸಂತೆಯ ಖದೀಮ ಎಂದು ಕರೆಯುತ್ತಾರೆ. ಆದರೆ ಇಲ್ಲಿ ಸರಕಾರವೇ ಹೆಚ್ಚು ಬೆಲೆಯಲ್ಲಿ ಮಾರಿ ಲಾಭ ಪಡೆಯುತ್ತಿದ್ದರೆ ಅದು ಬ್ಲಾಕ್ ಮಾರ್ಕೆಟ್ ಆಗುವುದಿಲ್ಲ. ನಿಜವಾಗಿಯೂ ಇಂದು ಇರುವ ಸರಕಾರದ ಆಹಾರದ ನೀತಿಯಿಂದ ಜನಕ್ಕೆ ಪ್ರಯೋಜನವಾಗುವುದಿಲ್ಲ ಎಂದು ಹೇಳಿದರೆ ಅದು ತಪ್ಪಾಗುವುದಿಲ್ಲ. ಲೆವಿ ಸಂಗ್ರಹಣೆಯಿಂದ ಬಹಳ ಜನರಿಗೆ ಕಷ್ಟವಾಗುತ್ತಿದೆ. ಅದರಲ್ಲೂ ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಇಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಇಲ್ಲಿರುವ ಸಣ್ಣ ಅಧಿಕಾರಿಗಳು ಇದು ವಿರೋಧಪಕ್ಷದವರ ಕ್ಷೇತ್ರ ಅದಕ್ಕಾಗಿ ಇಲ್ಲ ಜನ ಹೆಚ್ಚು ಲೆವಿ ಕೊಡಬೇಕೆಂದು ಕಡ್ಡಾಯವಾಗಿ ವಸೂಲು ಮಾಡುತ್ತಿದ್ದಾರೆ. ಎಲ್ಲ ಸರಕಾರಕ್ಕೆ ಅನುಕೂಲವಾದ ಬಾಲ ಬಡುಕರುಗಳು ಆದ ಅಧಿಕಾರಿಗಳು ಇರುತ್ತಾರೋ ಅವರೆಲ್ಲ ವಿರೋಧ ಪಕ್ಷದವರಿಗೆ ಇಲ್ಲದ ಕಿರುಕುಳಗಳನ್ನು ಕೊಟ್ಟು ಸರಕಾರದ ಶಹಬಾಷಗಿರಿಯನ್ನು ಪಡೆಯುತ್ತಿದ್ದಾರೆ. ಎಲ್ಲೆಲ್ಲ ವಿರೋಧ ಪಕ್ಷದ ಸದಸ್ಯರುಗಳು ಇರುತ್ತಾರೋ ಅಲ್ಲೆಲ್ಲಾ ಸರಕಾರದ ಅಧಿಕಾರಿಗಳು ಇಲ್ಲದ ತೊಂದರೆ ಕೊಟ್ಟು ಸಂಗ್ರಹಣೆ ಕಾರ್ಯ ಮಾಡುತ್ತಿದ್ದಾರೆ. ಮಾನ್ಯ ವಿದ್ಯಾ ಮಂತ್ರಿಗಳು ಕೂಡ ಈಚೆಗೆ ನಡೆದ ಉಪಚುನಾವಣೆಯಲ್ಲಿ ಮಂಡ್ಯದಲ್ಲಿದ್ದಾಗ ಅವರೇನು ಮಾಡಿದರು ಎನ್ನುವುದು ನಮಗೂ ಗೊತ್ತಿದೆ, ಅಲ್ಲಿ ಒಂದು ಕಡೆಯಲ್ಲಿ ಅಧಿಕಾರ ಸ್ಥಾನದಿಂದ ಬೇಕಾದಷ್ಟು ಭರವಸೆಗಳನ್ನೂ ಜನರಿಗೆ ಕೊಟ್ಟಿರುವ ನಿದರ್ಶನಗಳೂ ಇವೆ. ಒಂದು ಕಡೆ ಒಂದು ನ್ಯೂಸ್ ಪ್ರಿಂಟ್ ಕಟ್ಟಡ ಬೇಕೆಂದು ಹೇಳಿದಾಗ ಅಲ್ಲಿರುವ ಅಸಿಸ್ಟೆಂಟು ಇಂಜನೀಯರನ್ನು ಕರೆಸಿ ಅಲ್ಲೇ ಮಾಡಿಸಿಕೊಡಬೇಕೆಂದು ಹೇಳಿರುವ ಪರದಿಗಳೂ ನಮಗೆ ಗೊತ್ತು.

ಶ್ರೀ ಕೆ. ವಿ. ಶಂಕರಗೌಡ:—ನನಗೆ ಇಂತಹ Vote catching business ಬರುವುದಿಲ್ಲ. ಇದರಿಂದ ನನಗೇನೂ ಪ್ರಯೋಜನವೂ ಆಗುವುದಿಲ್ಲ.

ಶ್ರೀ ಜಿ. ವಿ. ಅಂಜನಪ್ಪ.—ಮಾನ್ಯ ವಿದ್ಯಾ ಸಚಿವರು ಹಿಂದೆ ತಿಪಟೂರಿನಲ್ಲಿ ಉಪಚುನಾವಣೆ ನಡೆದಾಗ ಅಲ್ಲಿ ಒಂದು ಸಾರಿ ಹೇಳಿದ್ದರು. ಮಂಡ್ಯದಲ್ಲಿ ಉಪಚುನಾವಣೆ ಬರಲಿ, ಅಲ್ಲಿ ನಿಮ್ಮ ಸೊಂಟವನ್ನು ಮುರಿದು ಹಾಕುತ್ತೇವೆ ಎಂದು ಹೇಳಿದ್ದು ಅವರಿಗೆ ನೆನಪಿಗೆ ಬಂದಿರಬಹುದು. ಮತ್ತು ಅಲ್ಲಿ ಅವರು ಸೊಂಟ ಮುರಿಯುವುದು ಒಂದೇ ಅಲ್ಲ, ಡಿಪಾಜಿಟ್ಟನ್ನೂ ಕೂಡ ಕಳೆದುಕೊಳ್ಳುವ ಪರಿಸ್ಥಿತಿಗೆ ಬರುತ್ತಾರೆ ಎಂದು ಹೇಳಿದ್ದರು. ಈಚೆಗೆ ಮಂಡ್ಯದಲ್ಲಿ ನಡೆದ ಉಪಚುನಾವಣೆ ಏನಾಯಿತು ಎನ್ನುವುದು ಅವರಿಗೂ ಗೊತ್ತು.

ಶ್ರೀ ಕೆ. ವಿ. ಶಂಕರಗೌಡ.—ನಾವು ನೀವು ಕುಡಿಸುವಷ್ಟು ಹೆಂಡ ಕುಡಿಸಲು ಆಗುವುದಿಲ್ಲ.

ಶ್ರೀ ಜಿ. ವಿ. ಅಂಜನಪ್ಪ.—ಹೆಂಡ ಕೊಡಿಸುವವರು ಯಾರು? ಕಾಂಗ್ರೆಸ್ಸಿನವರೇ ಕೊಡಬೇಕು ಹೆಂಡ ಕೊಡುವ ಜವಾಬುದಾರಿ ವಿರೋಧಪಕ್ಷದವರಿಗೆ ಇಲ್ಲ ಇರಲಿಲ್ಲ. ಮತ್ತು ಹೆಂಡ ಕುಡಿಸಲು ನಾವೇನು ಕಾಂಗ್ರೆಸ್ಸಿನವರಂತೆ ಖೋಟಾ ನೋಟುಗಳನ್ನೇನಾದರೂ ಮಾಡಲಕ್ಕೆ ಹೋಗಿದ್ದೆವೇನು? ಹೆಂಡ ಕುಡಿಸುವುದಕ್ಕೆ ಮಾನ್ಯ ಮಂತ್ರಿಗಳು ದುಡ್ಡು ಕೊಡಿಸುವಷ್ಟು ವಿರೋಧ ಪಕ್ಷದವರಲ್ಲ ದುಡ್ಡಿರಲಿಲ್ಲ, ಇಲ್ಲ ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಕೆಲಸ ಮಾಡಿದರು. ವಿರೋಧ ಪಕ್ಷದವರಿಗೆ ಆ ರೀತಿ ಮಾಡಲು ಯಾವ ಅವಕಾಶಗಳೂ ಇರಲಿಲ್ಲ. ನಿಮ್ಮಲ್ಲಿರುವಂತೆ ವಿರೋಧ ಪಕ್ಷದಲ್ಲಿ ಯಾರೂ ಖೋಟಾ ನೋಟುಗಳನ್ನು ಮಾಡಲು ಆಗುತ್ತಿಲ್ಲ. ನಾವು ದುಡ್ಡಿಗಾಗಿ ಬೇರೆಯವರಿಂದ ಭಿಕ್ಷೆ ಬೇಡಿ ತರುತ್ತಿದ್ದೆವು ಎನ್ನುವುದನ್ನು ಮಾತ್ರ ನಾವು ಒಪ್ಪಿಕೊಳ್ಳುತ್ತೇವೆ.

ಇನ್ನು ಕುಟುಂಬ ಯೋಜನೆಯ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಇದನ್ನು ನಹ ಒಂದು ಯೋಜನೆಯೆಂದು ಯಾರು ಹೇಳುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮಾನ್ಯ ಆಂಜನಪ್ಪನವರಿಗೆ ಕುಟುಂಬ ಯೋಜನೆಯ ವಿಷಯದಲ್ಲಿ ನಂಬಿಕೆ ಏನಾದರೂ ಇಟ್ಟಿದ್ದಾರೆಯೇ ?

ಶ್ರೀ ಜಿ. ವಿ. ಆಂಜನಪ್ಪ.—40ರಿಂದ 50 ವರ್ಷದವರೆಗೆ ವಯಸ್ಸಾಗಿ 6—7 ಮಕ್ಕಳಾಗಿರುವವರು ಅಂದರೆ ಮುದುಕರಾಗಿರುವವರು ಈ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಕುಟುಂಬ ಯೋಜನೆಗೆ ಒಳಪಡುವವರಿಗೆ 18 ರೂಪಾಯಿಗಳು, ಕರೆದುಕೊಂಡು ಬರುವವರಿಗೆ ಎರಡು ರೂಪಾಯಿಗಳನ್ನು ಈಗ ಕೊಡುತ್ತಿದ್ದಾರೆ. ಅದರಲ್ಲೂ ಕೂಡ ರಾಜಕೀಯ ನಡೆಯುತ್ತಿದೆ. ಈ ಯೋಜನೆಯನ್ನು ಏತಕ್ಕೆ ಜಾರಿಗೆ ತರಬೇಕಾಗಿತ್ತು ಎಂದು ಕೇಳುತ್ತೇನೆ. ಈ ಯೋಜನೆಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಪ್ರತಿಯೊಂದು ಬಾಬಿಗೂ ಒಂದೊಂದು ಯೋಜನೆಗಳಿವೆ. ಕೆಲವು ಕಾಲದವರೆಗೆ ಈ ಯೋಜನೆಗಳನ್ನೆಲ್ಲಾ ನಿಲ್ಲಿಸಿಬಿಟ್ಟರೆ ದೇಶಕ್ಕೆ ಒಳ್ಳೆಯದಾಗುತ್ತದೆಂದು ಕಾಣುತ್ತದೆ. ರಾಷ್ಟ್ರೀಯ ವಿಸ್ತರಣಾ ಯೋಜನೆ, ಕುಟುಂಬ ಯೋಜನೆ, ಸಹಕಾರ ಕ್ಷೇತ್ರ ಇವೆಲ್ಲವೂ ನಹ ಹೋಗಬೇಕು. ಇವುಗಳಿಗಾಗಿ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡುವುದನ್ನು ನಿಲ್ಲಿಸಬೇಕು. ಈ ಸರ್ಕಾರದವರು ಈ ಯೋಜನೆಗಳಿಗೆ ಇಷ್ಟೊಂದು ಹಣ ಖರ್ಚುಮಾಡಿದ ಮೇಲೂ ನಹ ಈ ರಾಜ್ಯ ಎಷ್ಟರಮಟ್ಟಿಗೆ ಉದ್ಧಾರವಾಗಿದೆಯೆಂದು ಕೇಳುತ್ತೇನೆ. ಇವತ್ತಿನ ದಿವಸ ಜನರು ಯಾವ ತಾಪತ್ರಯಗಳು, ಯಾವ ಕಷ್ಟಗಳು ಇಲ್ಲದೆ ಜೀವನ ಮಾಡುತ್ತಿದ್ದಾರೆಯೇ, ಜನಸಾಮಾನ್ಯರ ಆದಾಯ ಜಾಸ್ತಿಯಾಗಿದೆಯೇ ಎಂದು ಕೇಳುತ್ತೇನೆ. ಜನರಿಗೆ ಸಾಕಷ್ಟು ಆಹಾರ ಸಿಗುತ್ತಿದೆಯೇ, ಬಟ್ಟೆ ಸಿಗುತ್ತಿದೆಯೇ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಸಾಕಷ್ಟು ಶಾಲೆಗಳಿವೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಕೆ. ವಿ. ಶಂಕರಗೌಡ.—10 ವರ್ಷಗಳ ಹಿಂದೆ 500 ಹೈಸ್ಕೂಲುಗಳು ಇದ್ದವು, ಈಗ 1,500 ಇವೆ. 10 ವರ್ಷದ ಹಿಂದೆ ಒಟ್ಟು 10 ಸಾವಿರ ಸ್ಕೂಲ್‌ಗಳು ಇದ್ದರೆ ಈಗ 30 ಸಾವಿರ ಸ್ಕೂಲ್‌ಗಳಿವೆ. ಶೇಕಡ 92 ರಷ್ಟು ಮಕ್ಕಳು ಶಾಲೆಗೆ ಬರುತ್ತಿದ್ದಾರೆ.

ಶ್ರೀ ಆರ್. ಎಸ್. ಮಹಂತ ಶೆಟ್ಟಿ (ಸ್ಥಾನೀಯ ಪ್ರಾಧಿಕಾರೀ ಕ್ಷೇತ್ರ).—ಎರಡನೇ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಮಾನ್ಯ ಸದಸ್ಯರು ನೋಡಿ ಇಲ್ಲಿ ಮಾತನಾಡಬೇಕು. ಕಾಂಗ್ರೆಸ್ಸೇತರ ಸರ್ಕಾರಗಳು ಇರುವ ಕಡೆಗಳಲ್ಲಿ ಈ ರಾಜ್ಯದಲ್ಲಿ ನಡೆದಿರುವಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ನುಮ್ಮನೆ ಏನೂ ಪ್ರಗತಿಯಾಗಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ಕಾಂಗ್ರೆಸ್ಸೇತರ ಸರ್ಕಾರಗಳು ಅಡಳಿತ ನಡೆಸುವುದಕ್ಕೆ ಕೇಂದ್ರ ಸರ್ಕಾರದವರು ಬಿಡಬೇಕಲ್ಲ, ಇಲ್ಲಸಲ್ಲದ ಕಾರಣಗಳನ್ನು ಹೇಳಿಕೊಂಡು ಜನರ ಮೇಲೆ ಗುಂಡು ಹಾರಿಸುವುದು, ಲಾಠಿಚಾರ್ಜು ಮಾಡಿಸುವುದು, ಜನರಿಗೆ ಕಿರುಕುಳ ಕೊಡುವುದು ಇದನ್ನೆಲ್ಲಾ ಮಾಡಿಸುತ್ತಿದ್ದಾರೆ. ಇನ್ನು ಆ ಸರ್ಕಾರಗಳು ಯಾವ ರೀತಿ ಮುಂದುವರಿಯಬೇಕು ? ಆದ್ದರಿಂದ ನಾನು ಅದಷ್ಟು ಬೇಗ ಕುಟುಂಬ ಯೋಜನೆಯನ್ನು ಕೈಬಿಟ್ಟುಬಿಡಬೇಕೆಂದು ಹೇಳುತ್ತೇನೆ. ಬೇಕಾದರೆ ಈ ಯೋಜನೆಯ ಬಗ್ಗೆ ಜನರಿಗೆ ನೀತಿಯುತವಾದ ತಿಳಿವಳಿಕೆಗಳನ್ನು ಕೊಡಲಿ. ಹೆಚ್ಚು ಮಕ್ಕಳಾದರೆ ಸುಖಕರವಾದ ಜೀವನ ಮಾಡುವುದಕ್ಕೆ ತೊಂದರೆಯಾಗುತ್ತದೆಂದು ಪ್ರಚಾರ ಮಾಡಲಿ. ಆದರೆ ಈ ಯೋಜನೆಗಾಗಿ ಕೋಟಿಗಟ್ಟಲೆ ಹಣ ಖರ್ಚು ಮಾಡುವುದು ಸರಿಯಲ್ಲ.

ಇನ್ನು ಔಷಧ ನಿಯಂತ್ರಣದ ಬಗ್ಗೆ ಮಾನ್ಯ ರಾಜ್ಯಪಾಲರು ತಿಳಿಸಿದ್ದಾರೆ. ಈ ಬಗ್ಗೆ ಡಿಪ್ಲೋಮ ಮತ್ತು ಡಿಗ್ರಿ ತರಗತಿಗಳನ್ನು ನಡೆಸಲಾಗುತ್ತಿದೆಯೆಂದು ಹೇಳಿದ್ದಾರೆ. ಇದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ರಚನೆ ಮಾಡಿದ್ದಾರೆ. ಆ ಇಲಾಖೆಯವರು ಒಂದು ಕಾಲೇಜನ್ನು ನಡೆಸುತ್ತಿದ್ದಾರೆ. ಮೂಗಿಗಿಂತ ಮೂಗುತಿ ಭಾರ ಎಂದು ಹೇಳುವಂತೆ ಈ ಸರ್ಕಾರದವರು ದಿನಬೆಳಗಾದರೆ ಒಂದೊಂದು ಇಲಾಖೆಯನ್ನು ಪ್ರಾರಂಭ ಮಾಡುತ್ತಿದ್ದಾರೆ. ಈ ಮೂಲಕ ದೇಶದ ಹಣ, ರೈತರು ಕೊಡುವ ಹಣ ದುರುಪಯೋಗವಾಗುತ್ತಿದೆ. ಇದನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡಿ ಪ್ರತಿಯೊಂದಕ್ಕೂ ಇಲಾಖೆಗಳನ್ನು ಸೃಷ್ಟಿ ಮಾಡುವುದನ್ನು ನಿಲ್ಲಿಸಬೇಕು.

ಇನ್ನು ಗ್ರಾಮಾಂತರ ಮತ್ತು ಪೌರ ಪ್ರದೇಶದ ನೀರು ಸರಬರಾಜು ಬಗ್ಗೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ರಾಜ್ಯದ 215 ಟೌನುಗಳ ಪೈಕಿ 118 ಟೌನುಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಲಾಗಿದೆಯೆಂದು ಹೇಳಿದ್ದಾರೆ. ಈ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎಷ್ಟು ನಗರಗಳಿಗೆ ನೀರಿನ ಸೌಕರ್ಯವನ್ನು ಒದಗಿಸಿದ್ದಾ

(ಶ್ರೀ ಜಿ. ಎ. ಆಂಜನಪ್ಪ)

ತಂಬುದನ್ನು ತಿಳಿಸಲಿ. ಹಿಂದಿನ ಮಹಾರಾಜರುಗಳ ಕಾಲದಲ್ಲಿ, ಟಿಪ್ಪುಸುರ್ತಾನನ ಕಾಲದಲ್ಲಿ ಇದ್ದಂತಹ ನೀರು ನರಬರಾಜು ಯೋಜನೆಗಳನ್ನು ಸೇರಿಸಿಕೊಂಡು ಇಲ್ಲಿ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಈ ರೀತಿ ತಪ್ಪು ಅಂಕಿಅಂಶಗಳನ್ನು ಕೊಡುವುದು ಅಕ್ಷಮ್ಯ ಅಪರಾಧವೆಂದು ಹೇಳುತ್ತೇನೆ. ಹಳ್ಳಿಗಳಿಗೆ ಬೇಕಾದಷ್ಟು ನೀರನ್ನು ನರಬರಾಜು ಮಾಡಿದ್ದೇವೆಂದು ಹೇಳಿಕೊಂಡಿದ್ದಾರೆ. ಈ ಬಾಬಿಗಾಗಿ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದಾರೆ, ಎಕ್ಸಿಕ್ಯೂಟಿವ್ ಇಂಜನಿಯರುಗಳನ್ನು, ಚೀಫ್ ಇಂಜನಿಯರುಗಳನ್ನು ನೇಮಕ ಮಾಡುತ್ತಿದ್ದಾರೆ, ಹೊಸ ಹೊಸ ಡಿವಿಜನ್‌ಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ, ಆದರೂ ಕೂಡ ಎಷ್ಟೋ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸೌಲಭ್ಯಗಳೇ ಇಲ್ಲ. ಎಷ್ಟು ಹಳ್ಳಿಗಳಿಗೆ ಈ ಸರ್ಕಾರದವರು ನೀರಿನ ನರಬರಾಜು ಮಾಡಿದ್ದಾರೆಂಬ ಬಗ್ಗೆ ಅಂಕಿಅಂಶಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಟೌನ್‌ಗಳಿಗೆ ನೀರು ನರಬರಾಜು ಮಾಡುವ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆಯೇ ಹೊರತು ಹಳ್ಳಿಗಳ ಬಗ್ಗೆ ಕೊಟ್ಟಿಲ್ಲ. ನೆನ್ನೆ ದಿವಸ ಮಾನ್ಯ ಅಡಿಗ ಅವರು ಮಾತನಾಡುತ್ತಾ, ಮೈಸೂರು ರಾಜ್ಯದಲ್ಲಿ ಕುಡಿಯುವ ನೀರಿನ ಸೌಕರ್ಯವಿಲ್ಲದ ಹಳ್ಳಿಗಳೇ ಇಲ್ಲವೆಂದು ಹೇಳಿದರು. ಅವರು ಹಳ್ಳಿಗಳನ್ನೇ ನೋಡಿಲ್ಲವೆಂದು ಕಾಣುತ್ತದೆ. ರೂರಲ್ ವಾಟರ್ ಸಪ್ಲೈ ಯೋಜನೆಗೆ ಆಗತಕ್ಕಂಥ ಖರ್ಚು ಕೇಂದ್ರ ಸರ್ಕಾರದವರೇ ನೋಡಿಕೊಳ್ಳುತ್ತಿದ್ದರೂ ಸಹ, ಹಳ್ಳಿಗಳಿಗೆ ನೀರನ್ನು ನರಬರಾಜು ಮಾಡುವ ವಿಚಾರದಲ್ಲಿ ಈ ಸರ್ಕಾರದವರು ಕರ್ತವ್ಯಲೋಪ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಹಿಂದಿನ ವರ್ಷದ ರಾಜ್ಯಪಾಲರ ಭಾಷಣದಲ್ಲಿ 4 ಸಹಸ್ರ ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಬೇಕಾಗಿದೆಯೆಂದು ಹೇಳಿದ್ದರು. ಹಿಂದಿನ ವರ್ಷದ ರಾಜ್ಯಪಾಲರ ಭಾಷಣಕ್ಕೂ ಈ ವರ್ಷದ ರಾಜ್ಯಪಾಲರ ಭಾಷಣಕ್ಕೂ ಸಂಬಂಧವೇ ಇಲ್ಲ. ಈ ರೀತಿ ಸಂಬಂಧವಿಲ್ಲದ ವಿಚಾರಗಳನ್ನು ಈ ಸರ್ಕಾರದವರು ರಾಜ್ಯಪಾಲರ ಬಾಯಿನಲ್ಲಿ ಹೇಳಿಸಿದ್ದಾರೆ.

ಇನ್ನು ಕೃಷ್ಣಾ ಮತ್ತು ಕಾವೇರಿ ಯೋಜನೆಗಳ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಏಕೆಂದರೆ ಈ ವಿಚಾರದಲ್ಲಿ ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇವೆ. ಈ ಸರ್ಕಾರದವರು ನದಿ ನೀರಿನ ವಿವಾದಗಳನ್ನು ಇನ್ನೂ ಬಗೆಹರಿಸಿಲ್ಲ. ಇದು ನಾಚಿಕೆಪಡಬೇಕಾದ ವಿಚಾರ. ಕೋಳಿಯನ್ನು ಕೇಳಿ ಯಾರೂ ಸಂಭಾರ್ ಅರೆಯುವುದಿಲ್ಲ. ಆಂಧ್ರದವರು ಕೇಂದ್ರದವರನ್ನು ಮತ್ತು ಮಹಾರಾಷ್ಟ್ರದವರನ್ನು ಕೇಳಿದೆ ನಾಗಾರ್ಜುನ ಸಾಗರ ಅಣೆಕಟ್ಟನ್ನು ಕಟ್ಟಿದರು. ಈಗಾಗಲೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಈ ಸರ್ಕಾರದವರು ಕೇಂದ್ರದ ಅನುಮತಿಗಾಗಿ ಕಾಯುತ್ತಿದ್ದಾರೆ. ನಾನು ಪಬ್ಲಿಕ್ ಅಕೌಂಟ್ಸ್ ಕಮಿಯ ಸದಸ್ಯನಾಗಿ ಈ ದೇಶದ ಎಲ್ಲಾ ಯೋಜನೆಗಳನ್ನು ನೋಡಿಕೊಂಡು ಬಂದಿದ್ದೇನೆ. ಕೃಷ್ಣಾ ಮೇಲ್ಕುಂಡ ಯೋಜನೆ, ಘಟಪ್ರಭಾ, ಮಲಪ್ರಭಾ ಮುಂತಾವ ಎಲ್ಲಾ ಯೋಜನೆಗಳನ್ನು ನೋಡಿಕೊಂಡು ಬಂದಿದ್ದೇನೆ. ಈ ಯೋಜನೆಗಳನ್ನು ಇನ್ನೂ ಪ್ರಾರಂಭ ಮಾಡದಿದ್ದರೂ ಸಹ, ಈ ಯೋಜನೆಗಳ ಹತ್ತಿರ ಒಳ್ಳೆಯ ಬಂಗಲೆಗಳನ್ನು, ಪ್ರವಾಸಿ ಕೇಂದ್ರಗಳನ್ನು ಕಟ್ಟಿಸಿದ್ದಾರೆ. ಈ ಯೋಜನೆಗಳಿಗೆ ಸಂಬಂಧಪಟ್ಟಂತೆ ಒಂದು ಕಲ್ಲನ್ನೂ ಸಹ ಇದುವರೆಗೆ ಅಗೆದಿಲ್ಲ. ಮತ್ತು ಇನ್ನೂ ಜಾಗವನ್ನು ಕೂಡ ನಿಗದಿ ಮಾಡಿಲ್ಲ. ಇದಕ್ಕಿಂತಲೂ ಹೆಚ್ಚಿನ ದ್ರೋಹ ಇನ್ನು ಯಾವುದಿದೆ ಎಂದು ವಿಷಾದ ಪಡಬೇಕಾಗಿದೆ.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಮಾನ್ಯ ರಾಜ್ಯಪಾಲರು ಮಾತನಾಡುತ್ತಾ 1968-69 ರಲ್ಲಿ 12,000 ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಪೂರೈಸಲು ಕಾರ್ಯ ಕ್ರಮ ಹಾಕಿಕೊಳ್ಳಲಾಗಿದೆಯೆಂದು ಹೇಳಿದ್ದಾರೆ. ವಿದ್ಯುಚ್ಛಕ್ತಿ ಇರಾಬೆಯಲ್ಲಿ ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕೆಂದು ಸಹಸ್ರ ಸಹಸ್ರ ಅರ್ಜಿಗಳು ಬಂದು ಬಿದ್ದಿವೆ. ಎಷ್ಟೋ ಹಳ್ಳಿಗಳಿಗೆ ಇದುವರೆಗೆ ವಿದ್ಯುಚ್ಛಕ್ತಿ ಪೂರೈಕೆಯಾಗಿಲ್ಲ. ಈ ಸರ್ಕಾರದವರು ಎಲ್ಲಾ ವಿಚಾರದಲ್ಲೂ ಆಶಾ ಗೋಪುರವನ್ನು ಕಟ್ಟಿಕೊಂಡು ನಮಗೆ ಇಲ್ಲಸಲ್ಲದ ಅಂಕಿಅಂಶಗಳನ್ನು ಒದಗಿಸುತ್ತಿದ್ದಾರೆ.

ಇನ್ನು ಸಂಪರ್ಕಸಾಧನಗಳ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೆಲವು ಹೊಸ ರಸ್ತೆಗಳ ಮತ್ತು ಕೆಲವು ಸೇತುವೆಗಳ ನಿರ್ಮಾಣಕ್ಕಾಗಿ 1967-68 ರಲ್ಲಿ 312 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲಾಗಿದೆಯೆಂದು ಹೇಳಿದ್ದಾರೆ. ಈ ವಿಚಾರದಲ್ಲೂ ಸಹ ಉತ್ಪ್ರೇಕ್ಷೆಯಿಂದ ಕೂಡಿದ ಸಂಖ್ಯೆಯನ್ನು ಕೊಟ್ಟಿದ್ದಾರೆ. 1968-69 ರಲ್ಲಿ 80 ಮೈಲಿ ರಸ್ತೆಗಳ ನಿರ್ಮಾಣ ಮಾಡುತ್ತೇವೆಂದು ಹೇಳಿದ್ದಾರೆ. ಕೇವಲ 80 ಮೈಲಿಗಳ ರಸ್ತೆಯನ್ನು ಹೊಸದಾಗಿ ಮಾಡುತ್ತೇವೆಂದು ಹೇಳುವ ಈ ಸರ್ಕಾರದವರು ಸ್ವಾತಂತ್ರ್ಯ ಬಂದಮೇಲೆ ಇದುವರೆಗೆ ಎಷ್ಟು ಮೈಲಿಗಳ ರಸ್ತೆಯನ್ನು ನಿರ್ಮಾಣ ಮಾಡಿದ್ದಾರೆಂದು ತಿಳಿಸಲಿ. ಮುಖ್ಯವಾಗಿ ಗ್ರಾಮಾಂತರಗಳಿಗೆ ಹೆಚ್ಚು ಹೆಚ್ಚು ರಸ್ತೆಗ

ಳನ್ನು ನಿರ್ಮಾಣ ಮಾಡದಿದ್ದಮೇಲೆ ಈ ಸರ್ಕಾರದವರು ಏತಕ್ಕೆ ಇರಬೇಕೆಂದು ಕೇಳುತ್ತೇನೆ. ಇವರು ಪ್ರತಿ ವರ್ಷ 80 ಮೈಲಿಗಳಂತೆ ಹೊಸ ಹೊಸ ರಸ್ತೆಗಳನ್ನು ನಿರ್ಮಾಣ ಮಾಡಿರುವುದನ್ನು ಲೆಕ್ಕ ಹಾಕಿದರೆ ಇದುವರೆಗೆ ಅಂದರೆ ಸ್ವರಾಜ್ಯ ಬಂದಮೇಲೆ ಇದುವರೆಗೆ 1,500 ಮೈಲಿಗಳ ರಸ್ತೆಯನ್ನು ನಿರ್ಮಾಣ ಮಾಡಿರಬಹುದು.

ಇನ್ನು ಮಂಗಳೂರು ಬಂದರ್ ಬಗ್ಗೆ ಮಾನ್ಯ ಸಚಿವರು ಶಹಬಾಸ್‌ಗಿರಿ ಕೊಟ್ಟಿದ್ದಾರೆ. ಕೋಟಿ ಕೋಟಿಗಟ್ಟಲೆ ಹಣ ಇದಕ್ಕಾಗಿ ಖರ್ಚು ಮಾಡಿದ್ದಾರೆ. ಇಪ್ಪತ್ತನಾಲ್ಕು ಕೋಟಿ ರೂಪಾಯಿ ಮಂಜೂರಾತಿ ಕೇಂದ್ರ ಸರ್ಕಾರದಿಂದ ಸಿಕ್ಕಿದೆ ಎಂದು ಹೇಳಿದ್ದಾರೆ. ಆದರೆ ಇದು ಇಂಟರ್ ನ್ಯಾಷನರ್ ಪೋರ್ಟ್ ಆಗಬೇಕಾದರೆ ಅಲ್ಲಿ ಆಳ 60 ಅಡಿಯಾಗಬೇಕು. ಕೇವಲ 30 ಅಡಿ ಆಳ ಇರುವ ಬಂದರು ನಿರ್ಮಾಣ ಮಾಡಿದರೆ ಅದು ಹೇಗೆ ಇಂಟರ್ ನ್ಯಾಷನರ್ ಪೋರ್ಟ್ ಆಗುತ್ತದೆ? ಅರವತ್ತು ಸಹಸ್ರ ಟನ್ ತೂಕದ ಹಡಗು ಈ ಬಂದರಿಕ್ಕೆ ಬರಬೇಕಾದರೆ ಇಲ್ಲಿ ಆಳ 60 ಅಡಿ ಇರಬೇಕು ಎಂದು ತಜ್ಞರ ಅಭಿಪ್ರಾಯ ಇದೆ. 30 ಅಡಿ ಆಳಕ್ಕೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದ್ದೀರಿ. 60 ಅಡಿ ಆಳ ಮಾಡುವುದು ಸಾಧ್ಯವಿತ್ತು ಎಂದು ನನಗೆ ಅನಿಸುತ್ತದೆ.

ಇನ್ನು ಸಹಕಾರ ಸಂಸ್ಥೆಗಳ ವಿಚಾರ. ಈ ಸಹಕಾರ ಸಂಸ್ಥೆಗಳನ್ನು ವಜಾ ಮಾಡಿದರೆ ದೇಶಕ್ಕೆ ಕ್ಷೇಮವಾಗುತ್ತದೆ. ಈ ಸೊಸೈಟಿಗಳಲ್ಲಿ ಅವ್ಯವಹಾರ ನಡೆಯತಕ್ಕಂಥಾದ್ದನ್ನು ನೋಡುತ್ತಿದ್ದೇವೆ. ಈ ಸಹಕಾರ ಸಂಸ್ಥೆಗಳಿಂದ ಯಾರಿಗೆ ಉಪಯೋಗವಾಗುತ್ತಿದೆ? ಇದು ಕೇವಲ ನಿಮ್ಮ ಪಕ್ಷದವರಾದ ದಳ್ಳಾಳಿಗಳಿಗೆ ಪುಢಾರಿಗಳಿಗೆ ಮಾತ್ರ ಉಪಯೋಗವಾಗುತ್ತಿದೆ. ಜನತೆಗೆ ಉಪಯೋಗವಾಗದೆ ಬಹಳ ಅನ್ಯಾಯವಾಗುತ್ತಿದೆ. ಸೊಸೈಟಿಗಳಲ್ಲಿ ಹಣ ದುರುಪಯೋಗವಾಗುತ್ತಿದೆ ಹಾಗು ಹಣ ರೈತರಿಗೆ ಸೇರುವುದಿಲ್ಲ, ಆದರೆ ಮಧ್ಯವರ್ತಿ ದಳ್ಳಾಳಿಗಳಿಗೆ ಸೇರುತ್ತದೆ. ಆದರೂ ಕೂಡ ಸರ್ಕಾರ ನುಮ್ಮನೆ ಕೂತಿದೆ. ಆದುದರಿಂದ ಇಂಥ ಸೊಸೈಟಿಗಳನ್ನು ಕೂಡಲೇ ವಜಾ ಮಾಡಿ ಯಾರಿಗೆ ಹಣದ ಅವಶ್ಯಕತೆ ಇದೆಯೋ ಅಂಥವರಿಗೆ ನೇರವಾಗಿ ಸರ್ಕಾರದವರೇ ಕೊಡಲಿ. ಈ ಸೊಸೈಟಿ ಸಹವಾಸ ತೆಗೆದುಹಾಕಿದರೆ ನುಹೋಪಕಾರವಾಗುತ್ತದೆ. ಚಿತ್ರದುರ್ಗ ಸಹಕಾರಿ ಸಂಘದಲ್ಲಿ ಅನ್ಯಾಯದ ವಹಿವಾಟು ನಡೆದಿದ್ದನ್ನು ನೋಡಿದರೆ ಕಣ್ಣು ಮುಚ್ಚಬೇಕು ಎಂದು ಅನಿಸುತ್ತದೆ. ಎಲ್ಲಿ ನೋಡಿದರೂ ಅಲ್ಲಿ ಅನ್ಯಾಯ ಲಂಚ ಇದೆ. ಲಕ್ಷ ಗಟ್ಟಲೆ ಹಣ ಬಾಕಿ ಇದೆ ರೈತರಿಗೆ ಏನೂ ಪ್ರಯೋಜನವಾಗಿಲ್ಲ. ಒಂದು ಸಲ ಸಾಲ ಕೊಟ್ಟಮೇಲೆ ಹಣ ವಸೂಲು ಬಗ್ಗೆ ಕೇಳುವುದೇ ಇಲ್ಲ. ಈ ರೀತಿ ಆದರೆ ಸರ್ಕಾರ ಹೇಗೆ ನಡೆಯುತ್ತದೆ? ವಸೂಲ್ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ! ರಾಜ್ಯಪಾಲರ ಭಾಷಣದಲ್ಲಿ ಈ ವಿಷಯ ಪ್ರಸ್ತಾಪವಾಗಿಲ್ಲ. ಈಗಾಗಲೇ ಕೊಟ್ಟಿರತಕ್ಕಂಥ ಸಾಲದ ಹಣ ವಸೂಲ್ಮಾಡಿದರೆ ಹತ್ತಾರು ವರ್ಷ ಹೊಸದಾಗಿ ತೆರಿಗೆ ಹಾಕತಕ್ಕಂಥ ಪ್ರಮೇಯವೇ ಇಲ್ಲ. ನಿಮ್ಮ ಸಂಬಂಧಿಕರಿಗೆ ನಿಮ್ಮ ಹಿಂಬಾಲಕರಿಗೆ ಲಕ್ಷ ಗಟ್ಟಲೆ ಹಣ ಸಾಲ ಕೊಡುತ್ತೀರಿ. ಈ ಹಣ ವಾಪಸ್ಸು ಬರಲು ಸಾಧ್ಯವಿಲ್ಲ. ಆದುದರಿಂದ ಲಕ್ಷಗಟ್ಟಲೆ ಹಣ ಪೋಲು ಮಾಡುತ್ತೀರಿ. ಈ ರೀತಿ ಮಾಡಿದರೆ ಜನರ ಉದ್ಧಾರ ಹೇಗೆ ಆಗುತ್ತದೆ? ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಎಂ.ಎಸ್.ಕೆ. ಮಿಲ್ಸ್; ಇದು ಸಿಂಕಿಂಗ್ ಕನ್‌ಸರ್ನ್ ಆಗಿದೆ. ಇದಕ್ಕೆ ದುಡ್ಡು ಕೊಡಬೇಡಿ ಎಂದು ತಜ್ಞರು ಹೇಳಿದ್ದರು. ಈ ಬಗ್ಗೆ ಈ ಸಭೆಯಲ್ಲಿ ಕೂಡ ನಾವು ಟೀಕಿಸಿದರೂ ಸಹ ಹಣ ಕೊಟ್ಟಿದ್ದೀರಿ. ಹುಬ್ಬಳ್ಳಿ ಕಾಟನ್ ಮಿಲ್ಸ್ ಸಂಸ್ಥೆಗೆ ಒಂದೂವರೆ ಕೋಟಿ ರೂಪಾಯಿ ಕೊಟ್ಟಿದ್ದೀರಿ. ಗಿರಣಿ ನಡೆಸಲು ಯೋಗ್ಯತೆ ಇದೆಯೇ ದಕ್ಷತೆ ಇದೆಯೇ ಆರ್ಥಿಕ ಸ್ಥಿತಿ ಸರಿಯಾಗಿ ಇದೆಯೇ ಎನ್ನುವುದನ್ನು ಯೋಚನೆ ಮಾಡದೆ ದಾವಣಗೆರೆಯ ಚಿಗಟೇರಿ ಮಿಲ್ಸ್‌ಗೆ ಹತ್ತು ಲಕ್ಷ ರೂಪಾಯಿ ಕೊಟ್ಟಿದ್ದೀರಿ. ವಿಷಯ ಗೊತ್ತಿದ್ದರೂ ಕೂಡ ಅಂಥವರಿಗೆ ಹಣ ಕೊಡುತ್ತೀರಿ. ಈ ರೀತಿ ಸಾರ್ವಜನಿಕರ ಹಣ ಪೋಲು ಮಾಡುವುದು ಒಳ್ಳೆಯದಲ್ಲ. ಇದನ್ನು ಸರಿಪಡಿಸಿಕೊಳ್ಳಬೇಕು ಎಂದು ಸೂಚನೆ ಮಾಡಲು ಇಷ್ಟ ಪಡುತ್ತೇನೆ.

ಇನ್ನು ಸಮಾಜ ಕಲ್ಯಾಣ. ಸಮಾಜ ಕಲ್ಯಾಣದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಸಾಧನೆಯು ಕಾರ್ಯಕ್ರಮವನ್ನು ತೀವ್ರತರವಾಗಿ ಸಾಧಿಸಲಾಗುತ್ತಿದೆ. ಇದರಲ್ಲೂ ಕೂಡ ಹಿಂದುಳಿದ ವರ್ಗಗಳ ವಿದ್ಯಾಭಿವೃದ್ಧಿ ಮತ್ತು ಅವರ ಆರ್ಥಿಕಾಭಿವೃದ್ಧಿಯು ಸಾಧ್ಯವಾಗುವಂತೆ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಹೆಚ್ಚಿಗೆ ಗಮನ ನೀಡಲಾಗುವುದು ಎಂದು ಶಹಬಾಸಗಿರಿ ಕೊಟ್ಟಿದ್ದಾರೆ. ಹಾಗಾದರೆ ಇದು ಎಲ್ಲಿ ಆಗಿದೆ? ಸಮಾಜ ಕಲ್ಯಾಣ ಇಲಾಖೆಗೆ 50 ಜೀಪುಗಳನ್ನು ಕೊಟ್ಟಿರಬಹುದು. ಈ ಜೀಪುಗಳನ್ನು ಅಧಿಕಾರಿಗಳು ಮಜಾ ಮಾಡಿ ತಿರುಗುವುದಕ್ಕೆ ಉಪಯೋಗಿಸುತ್ತಾರೆ. ಸಮಾಜ ಕಲ್ಯಾಣ ಎಲ್ಲಿ ಆಗಿದೆ? ಹರಿಜನರ ಗಿರಿಜನರ ಉದ್ಧಾರ ಮಾಡತಕ್ಕಂಥ ಪ್ರಯತ್ನ ಏನೂ ನಡೆಯುತ್ತಿಲ್ಲ. ಈ ಇಲಾಖೆಯಲ್ಲಿ ಲಂಚಾವತಾರ ನಡೆದಿದೆ. ನಿಜವಾಗಿ ಸಮಾಜ ಕಲ್ಯಾಣವಾಗುತ್ತಿಲ್ಲ ಎಂದು ಹೇಳಬೇಕಾಗುತ್ತದೆ.

(ಶ್ರೀ ಜಿ. ವಿ. ಅಂಜನಪ್ಪ)

ಇಂದು ದೇಶದಲ್ಲಿ ಇಷ್ಟೊಂದು ಎಲ್ಲರ ಗಮನ ಸೆಳೆದಿರತಕ್ಕಂಥ ಇನ್ನೊಂದು ವಿಚಾರವನ್ನು ಅದೇಕೋ ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಲಿಲ್ಲ. ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿ ಎರಡು ಕುದುರೆಗಳ ಮೇಲೆ ಕಾಲು ಇಟ್ಟು ಎರಡೂ ಕುದುರೆಯ ಕಡಿವಾಣ ಹಿಡಿದು ಸವಾರಿ ಮಾಡುತ್ತಿದ್ದಾರೆ. ಇದು ಪ್ರಾಮುಖ್ಯವಾದ ವಿಷಯವಾಗಿದ್ದರೂ ಕೂಡ ರಾಜ್ಯಪಾಲರು ಭಾಷಣದಲ್ಲಿ ಇದನ್ನು ಏತಕ್ಕೆ ಹೇಳಲಿಲ್ಲ? ನಮ್ಮ ರಾಜ್ಯದ ನಾಯಕರು ಅಖಿಲ ಭಾರತ ಮಟ್ಟಕ್ಕೆ ಏರಿದ್ದಾರೆ ಪ್ರಗತಿ ಸಾಧನೆ ಮಾಡಿದ್ದಾರೆ ಎಂದು ರಾಜ್ಯಪಾಲರು ಹೇಳಬಹುದಾಗಿತ್ತು. ಮುಖ್ಯ ಮಂತ್ರಿಗಳಾದ ನಿಜಲಿಂಗಪ್ಪನವರು, ಅಧಿಕಾರ ಸ್ಥಾನದಿಂದ ನಿವೃತ್ತರಾಗಿ ಜೋಗಿಮಟ್ಟಿ ಎಂಬಲ್ಲಿ ಜೋಪಡಿ ಕಟ್ಟಿಕೊಳ್ಳುತ್ತೇನೆ ಎಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ಶ್ರೀಮಾನ್ ನಿಜಲಿಂಗಪ್ಪನವರಿಗೆ ನಾಲ್ಕು ಎಕರೆ ಜಮೀನು, ಮತ್ತು ಅವರ ಹಿಂಬಾಲಕರು 20 ಜನಗಳಿಗೆ ಜಮೀನು ಕೊಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಜೋಗಿಮಟ್ಟಿ ಪ್ರದೇಶದಲ್ಲಿ, ಸ್ಪೆಷಲ್ ಫಾರೆಸ್ಟ್‌ನಲ್ಲಿ ಈ ರೀತಿ ಜಮೀನು ತೆಗೆದುಕೊಂಡಿದ್ದಾರೆ. ದೇಶದ ಹೊಣೆಗಾರಿಕೆಯನ್ನು ಅರಿತಿರುವವರು, ದೇಶದ ಅಭಿವೃದ್ಧಿಯಲ್ಲಿ, ಅಭ್ಯುದಯದಲ್ಲಿ ಆಸಕ್ತಿ ವಹಿಸಿರುವವರು, ಇಂಥ ಜನ, ನಾನು ಸನ್ಯಾಸಿಯಾಗುತ್ತೇನೆ. ನನಗೆ ಏನೂ ಬೇಕಾಗಿಲ್ಲ. ಎಂದು ಹೇಳುವ ಜನ ಜೋಗಿಮಟ್ಟಿ ಸ್ಪೆಷಲ್ ಫಾರೆಸ್ಟ್‌ನಲ್ಲಿ ಹೀಗೆ ಹಲವು ಭವ್ಯವಾದ ಬಂಗಲೆಗಳನ್ನು ಕಟ್ಟುವುದಕ್ಕೆ ಹೊರಟಿದ್ದಾರೆ. ಇದಕ್ಕೆ ಏನು ಹೇಳಬೇಕು? ಅರಣ್ಯವನ್ನು ಹಾಳು ಮಾಡಬಾರದು, ವನ ಸಂಪತ್ತನ್ನು ಬೆಳೆಸಬೇಕು ಎನ್ನುವುದು ರಾಜ್ಯದ ನೀತಿಯಾಗಿದ್ದರೂ ಕೂಡ, ಅರಣ್ಯ ವನ್ನು ಸಾಗುವಳಿಗೆ ಮಾತ್ರ ಬಿಡುಗಡೆ ಮಾಡಬಹುದು ಎಂದು ರಾಜ್ಯದ ನೀತಿ ಇದ್ದರೂ ಕೂಡ ಮುಖ್ಯ ಮಂತ್ರಿಗಳು ಮತ್ತು ಇತರರು ಸ್ಪೆಷಲ್ ಫಾರೆಸ್ಟಿನಲ್ಲಿ ಆಸ್ತಿಯನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇದಕ್ಕಿಂತ ನಾಚಿಕೆಗೇಡಿನ ವಿಚಾರ ಇನ್ನೇನಿದೆ? ಆ ವಿಚಾರದ ಬಗ್ಗೆ ರಾಜ್ಯಪಾಲರು ಏಕೆ ಏನೂ ಹೇಳಿಲ್ಲ ಎಂದು ಕೇಳುತ್ತೇನೆ.

ತಮಗೆ ಬೇಕಾದ ಒಬ್ಬ ವ್ಯಕ್ತಿಗೆ ಅನುಕೂಲ ಮಾಡಿಕೊಡಬೇಕು ಎನ್ನುವ ದೃಷ್ಟಿಯಿಂದ ಇವತ್ತಿನ ದಿವಸ ಶಾಸನಕರ ಭವನದ ಹಿಂದುಗಡೆ ಒಂದು ಪೆಟ್ರೋಲ್ ಬಂಕಿಗೆ ನ್ಯಳ ಕೊಡುವುದಕ್ಕೆ ಪ್ರಯತ್ನಗಳು ನಡೆಯುತ್ತಿವೆ. ಇವರು ಈ ದೇಶವನ್ನು ಮಾರಬೇಕೆಂದು ಹೊರಟಿದ್ದಾರೆಯೇ ಹೇಗೆ ಎಂದು ಕೇಳುತ್ತೇನೆ.

ಈ ಎಲ್ಲ ವಿಚಾರಗಳನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಇನ್ನು ಮುಂದಾದರೂ ಸರ್ಕಾರದವರು ಇಂಥ ಟೀಕೆಗಳಿಗೆ ಅವಕಾಶ ಕೊಡದ ರೀತಿಯಲ್ಲಿ ವರ್ತನೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Smt. M. R. LAKSHAMMA (Graduates' Constituency).—Mr. Chairman, I do not propose to go into the Speech of the Governor, para by para, because that has been "sparklingly" done by the hon'ble member Sri K. Suryanarayana Adiga. I also feel that any Government which has the welfare of its subjects in its view is bound to carry out the measures that are calculated to the prosperity of the country and therefore, I do not wish to go into the speech para by para. Nor do I look to the things with a jaundiced eye as Sri G. V. Anjanappa. He seems to be in a very destructive mood today. He does not believe in planning and so says do away with it; he does not believe in family planning and so says do away with it; he does not find co-operation congenial and so says do away with it. This is his view to do away with every planning. Therefore I wish to touch upon a few salient features and be done with it.

First of all I wish to welcome one very commendable feature mentioned on page 10, *i.e.*, project to feed four lakh children during the current year. I feel that this augurs very well for the State and for

the welfare of the children. It is well said that the statesman looks to day after tomorrow while the administrator looks to the need of the day. This is certainly a statesmanlike policy that so many lakhs of children will be benefitted at a period when many many families are unable to hav good food and unable to feed their children in a satisfactory or adequate manner. Therefore I welcome this proposal. I also feel very happy at one other thing mentioned on page 26. It is the contemplation of the exploitation of the magnetite iron ore at Kudremukha. It is stated that Sri Sampath Iyengar, the late teacher of our Chief Minister long ago thought that the ore in this range predicted a great future for this area this has now come true. Today it is on the anvil of implementation stage and the National Mineral Development Corporation are at their investigations and when the scheme is to be realised, the State will have a very great windfall. In fact the iron ore will be nothing but golden ore. So valuable will it be and so profitable will it be for the State. Therefore I am happy that the Government is taking steps to see that the ore is exploited as expeditiously as possible in the Kudremukh region.

